**2019–20ನೇ ಸಾಲಿನ ಕೃಷಿ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ವಿವರ.**

**ರೂ. ಲಕ್ಷಗಳಲ್ಲಿ**

| .ಕ್ರ. ಸಂ . | ಯೋಜನೆ | ಲೆಕ್ಕ ಶೀರ್ಷಿಕೆ | ಆಯವ್ಯಯ 2019–20 |
|---|---|---|---|
| 1 | ಕೃಷಿ ಆಯುಕ್ತಾಲಯ | 2401–00–001–1–01 | 6217.00 |
| 2 | ಅನುಸೂಚಿತ ಜಾತಿಗಳ ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ | 2401–00–001–1–75 | 1777.29 |
| 3 | ಕೇಂದ್ರ ಪುರಸ್ಕೃತ ಯೋಜನೆ – ರಾಷ್ಟ್ರೀಯ ಆಹಾರ ಸುರಕ್ಷತೆ ಮಿಷನ್ | 2401–00–102–0–08 | 17477.00 |
| 4 | ಕೃಷಿ ಭಾಗ್ಯ | 2401–00–102–0–27 | 25000.00 |
| 5 | ಇತರೆ ಕೃಷಿ ಯೋಜನೆಗಳು: | 2401–00–102–0–28 | 9119.00 |
| 6 | ಬೀಜ ಕ್ಷೇತ್ರಗಳು | 2401–00–103–0–01 | 492.00 |
| 7 | ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ | 2401–00–103–0–15 | 62823.00 |
| 8 | ಕೃಷಿ ಕ್ಷೇತ್ರ ಮತ್ತು ಕೃಷಿ ಅಭಿವೃದ್ಧಿ ಕೇಂದ್ರಗಳು | 2401–00–104–0–10 | 165.00 |
| 9 | ಸಾವಯವ ಕೃಷಿ | 2401–00–104–0–12 | 9700.00 |
| 10 | ಕೇಂದ್ರ ಪುರಸ್ಕೃತ ಯೋಜನೆ –ಎನ್.ಎಮ್.ಎಸ್.ಎ.– ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ | 2401–00–108–1–15 | 36818.00 |
| 11 | ಕೇಂದ್ರ ಪುರಸ್ಕೃತ ಯೋಜನೆ –ಎನ್.ಎಮ್.ಎಸ್.ಎ.–ಇತರೆ ಘಟಕಗಳು | 2401–00–108–1–16 | 6065.00 |
| 12 | ಕೃಷಿ ವಿಸ್ತರಣೆ ಮತ್ತು ತರಬೇತಿ | 2401–00–109–0–21 | 5402.00 |
| 13 | ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕಮ (WYTEP) | 2401–00–109–0–80 | 481.00 |
| 14 | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿಫಸಲ್ ಬಿಮಾ ಯೋಜನೆ (ಹೊಸ ಬೆಳೆ ವಿಮಾ ಯೋಜನೆ) | 2401–00–110–0–07 | 84500.00 |
| 16 | ಕೇಂದ್ರ ಪುರಸ್ಕೃತ ಯೋಜನೆ – ರಾಷ್ಟೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ (NMAET) | 2401–00–800–1–53 | 8530.00 |
| 17 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) | 2401–00–800–1–57 | 19800.00 |
| 18 | ಖಾಲಿ ಹುದ್ದೆಗಳಿಗಾಗಿ ಅನುದಾನ | 2401–00–800–1–70 | 464.00 |
| 19 | ವೇತನಕ್ಕಾಗಿ ಹೆಚ್ಚುವರಿ ಅನುದಾನ –6ನೇ ವೇತನ ಆಯೋಗ | 2401–00–800–1–71 | 24000.00 |
| 20 | ಜಿಲ್ಲಾ ಪಂಚಾಯತ್‌ಗೆ ಸಹಾಯಧನ | 2401–00–196–1–01 | 8781.89 |
| 21 | ಜಿಲ್ಲಾ ಪಂಚಾಯತ್‌ಗೆ ಸಹಾಯಧನ - ISOPOM | 2401–00–196–6–13 | 687.00 |
| 22 | ತಾಲ್ಲೂಕು ಪಂಚಾಯತ್‌ಗೆ ಸಹಾಯಧನ | 2401–00–197–1–01 | 11727.95 |
| 23 | ಕೃಷಿ ಮೂಲಭೂತ ಸೌಕರ್ಯ | 4401–00–001–1–01 | 5120.00 |
| 24 | ಇಸ್ರೇಲ್ ಮಾದರಿ ಕೃಷಿ ತಾಂತ್ರಿಕತೆ ಗುಚ್ಛಗಳ ಅಭಿವೃದ್ಧಿ | 4401–00–108–0–01 | 14592.00 |
| 25 | ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ | 2402–00–101–0–01 | 40.00 |
| | ಒಟ್ಟು | | **359779.13** |

## 2019–20ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗಿರುವ ಯೋಜನೆಗಳ ವಿವರ

**1.ಕೃಷಿ ಆಯುಕ್ತಾಲಯ : (2401–00–001–1–01)** ಈ ಕಾರ್ಯಕ್ರಮದ ಅನುಷ್ಠಾನಕ್ಕೆ **ರೂ.6217.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಅ. ಇಲಾಖೆಯ ಉತ್ತಮ ಆಡಳಿತ ವ್ಯವಸ್ಥೆಗಾಗಿ ಹಾಗೂ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸೂಕ್ತ ವಾತಾವರಣವನ್ನು ಒದಗಿಸಲು, ಅಧಿಕಾರಿ/ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆ, ಬಾಡಿಗೆ ಆಧಾರದ ಮೇಲೆ ವಾಹನಗಳ ಬಳಕೆ/ಪೀಠೋಪಕರಣಗಳ ಖರೀದಿ, ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮದಡಿ ಅಧಿಕಾರಿ ಸಿಬ್ಬಂದಿ ವೇತನ. ಕೆ–ಕಿಸಾನ್ ಯೋಜನೆಯ service agreement ರನ್ವಯ ಅನುಷ್ಟಾನ ಹಾಗೂ ಯೋಜನೆಯಡಿ ಅನುಸ್ಥಾಪಿಸಲಾದ ಯೋಜನಾ ಸೌಲಭ್ಯಗಳ ವಾರ್ಷಿಕ ನಿರ್ವಹಣಾ ವೆಚ್ಚ ,ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನವನ್ನು ಗಣಕೀಕರಣಗೊಳಿಸಲು ತಂತ್ರಾಂಶಗಳನ್ನು ಅಭಿವೃದ್ಧಿಗೊಳಿಸಲು, ಗಣಕಯಂತ್ರ ಮತ್ತು ಪೂರಕ ಸಾಧನ, ಸೋಲಾರ್ ಹೈಬ್ರಿಡ್ ಯುಪಿಎಸ್, ಗಣಕಯಂತ್ರ ಸ್ಟೇಷನರೀಸ್, ಕನ್ಸೂಮೆಬಲ್ ಆರ್ಟಿಕಲ್ಸ್, ಇತ್ಯಾದಿಗಳ ಖರೀದಿ, ಗಣಕಯಂತ್ರ ಹಾಗೂ ತಂತ್ರಾಂಶಗಳ ತರಬೇತಿ ವೆಚ್ಚ. ಇಲಾಖೆಯ ಅಧಿಕಾರಿಗಳಿಗೆ ಒದಗಿಸಲಾದ ಸಿ.ಯು.ಜಿ. ಸಿಮ್ ಕಾರ್ಡ್‌ಗಳ ಮಾಸಿಕ ಶುಲ್ಕ ಪಾವತಿ ಹಾಗೂ ಯೋಜನೆಗಳನ್ನು ತರ್ಕಬದ್ಧಗೊಳಿಸಲು ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ Project Monitoring Unit ನ ವೆಚ್ಚಕ್ಕಾಗಿ ಅನುದಾನ ಬಳಕೆ (KEONICS ಸಂಸ್ಥೆಯ ಮೂಲಕ), ದೂರವಾಣಿ ವೆಚ್ಚಗಳು, ಕಟ್ಟಡ ವೆಚ್ಚ (ರೈ.ಸಂ.ಕೇ. ಗಳ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ), ಭೂಮಿ ಮತ್ತು ಕಟ್ಟಡ (ಕೇಂದ್ರ ಕಚೇರಿಯ ಸಿವಿಲ್ ಕಾಮಗಾರಿ ಮತ್ತು ನಿರ್ವಹಣೆ), ಕಟ್ಟಡಗಳ ನಿರ್ವಹಣೆ (ಜ.ಕೃ.ನಿ, ಉ.ಕೃ.ನಿ, ಸ.ಕೃನಿ ಮತ್ತು ರೈ.ಸಂ.ಕೇ, ಇತರೆ ಇಲಾಖೆ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆ), ಸಂಶೋಧನೆ ಹಾಗೂ ಅಲ್ಪಾವಧಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**2.ಅನುಸೂಚಿತ ಜಾತಿಗಳ ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ :(2401–00–001–1–75) ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ. 1777.29.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.** 2017–18ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಉಳಿಕೆಯಾದ ಅನುದಾನವನ್ನು 2019–20ನೇ ಸಾಲಿನಲ್ಲಿ ಕೃಷಿ ಇಲಾಖೆಯ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುವುದು.

**3. ಕೇಂದ್ರ ಪುರಸ್ಕೃತ ಯೋಜನೆ ರಾಷ್ಟ್ರೀಯ ಆಹಾರ ಸುರಕ್ಷತೆ ಮಿಷನ್–ಇತರೆ ಬೆಳೆಗಳು ಮತ್ತು ಎಣ್ಣೆ ಕಾಳುಗಳು (NFSM) (2401–00–102–0–08) : ರೂ.17477.00 ಲಕ್ಷಗಳು**

**ಎನ್.ಎಫ್.ಎಸ್.ಎಂ–** ಇತರೆ ಬೆಳೆಗಳು (ಅಕ್ಕಿ, ದ್ವಿದಳಧಾನ್ಯಗಳು, ನ್ಯೂಟ್ರಿ ಸಿರಿಧಾನ್ಯ ಮತ್ತು ವಾಣಿಜ್ಯ ಬೆಳೆಗಳು) ಯೋಜನೆಯಡಿ ನೂತನ/ ಸುಧಾರಿತ ತಾಂತ್ರಿಕತೆಗಳ ಗುಚ್ಚ ಪ್ರಾತ್ಯಕ್ಷಿಕೆ, ಸುಧಾರಿತ ತಳಿ / ಹೈಬ್ರಿಡ್ ಬೀಜ ವಿತರಣೆ, ಸಮಗ್ರ ಪೋಷಕಾಂಶ ಮತ್ತು ಸಮಗ್ರ ಪೀಡೆ ನಿರ್ವಹಣೆಗೆ ಪರಿಕರಗಳ ವಿತರಣೆ, ವಿವಿಧ ಯಂತ್ರೋಪಕರಣಗಳು ಹಾಗೂ ಸಮರ್ಥ ನೀರು ಬಳಕೆಗೆ ಪಂಪ್ ಸೆಟ್, ಹನಿ ನೀರಾವರಿ, ಕೊಯ್ಲೋತ್ತರ ತಾಂತ್ರಿಕ ಉಪಕರಣಗಳ ವಿತರಣೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಭತ್ತದ ಕಟಾವಿನ ನಂತರ/ ಭತ್ತದ ಬೀಳು ಗದ್ದೆಯಲ್ಲಿ ದ್ವಿದಳಧಾನ್ಯ ಬೆಳೆಯನ್ನು ಬೆಳೆಯುವ ಪ್ರಾತ್ಯಕ್ಷಿಕೆ, ಕಬ್ಬಿನ ಬೆಳೆಯಲ್ಲಿ ದ್ವಿದಳಧಾನ್ಯಗಳನ್ನು ಬೆಳೆಯುವ ಪ್ರಾತ್ಯಕ್ಷಿಕೆಗಳ ಮೂಲಕ ದ್ವಿದಳಧಾನ್ಯಗಳ ಕ್ಷೇತ್ರ ಮತ್ತು ರೈತರ ಆದಾಯ ಹೆಚ್ಚಿಸುವುದು, ದ್ವಿದಳ ಧಾನ್ಯಗಳು ಮತ್ತು ನ್ಯೂಟ್ರಿ ಸಿರಿಧಾನ್ಯಗಳ ಸುಧಾರಿತ ತಳಿಗಳ ಪ್ರಮಾಣೀಕೃತ ಬೀಜೋತ್ಪಾದನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಯೋಜಿಸಲಾಗಿದೆ.

**ಎನ್.ಎಫ್.ಎಸ್.ಎಂ–ಎಣ್ಣೆಕಾಳುಗಳು** –ಯೋಜನೆಯಡಿ ನೂತನ/ಸುಧಾರಿತ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಎಫ್.ಎಫ್.ಎಸ್. ಪ್ರಾತ್ಯಕ್ಷಿಕೆ, ತಳಿವರ್ಧಕ ಬಿತ್ತನೆ ಬೀಜ ಖರೀದಿ, ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು, ಇತರೆ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಸಂಶೋಧನಾ ಕೇಂದ್ರಗಳಿಂದ ತಳಿವರ್ಧಕ ಬಿತ್ತನೆ ಬೀಜವನ್ನು ಖರೀದಿಸುವ ಬೀಜ ಸಂಸ್ಥೆಗಳಿಗೆ(ಕೆ.ಎಸ್.ಎಸ್.ಸಿ/ಕೆ.ಓ.ಎಫ್/ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು) ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದ ಬೀಜಕ್ಕೆ ಪೂರ್ತಿ ಹಣವನ್ನು Grant-in-aid ಮೂಲಕ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರವು ನೀಡಿರುವ ಆದೇಶದಂತೆ ಪಾವತಿ ಮಾಡವುದು, ಪ್ರಮಾಣಿತ ಬಿತ್ತನೆಬೀಜ ವಿತರಣಾ/ಉತ್ಪಾದನಾ ಕಾರ್ಯಕ್ರಮ, ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆ, ಎಫ್.ಎಫ್.ಎಸ್. ಪ್ರಾತ್ಯಕ್ಷಿಕೆ, ತರಬೇತಿ, ಪ್ರಚಾರ/ನಿರ್ವಹಣೆ, ಜಿಪ್ಸಂ/ಪೈರೇಟ್ಸ್ ಸರಬರಾಜು, ಕೀಟನಾಶಕ/ಲಘುಪೋಷಕಾಂಶಗಳು, ಕಳೆನಾಶಕ, ರೈಜೋಬಿಯಂ ಜೀವಾಣು/ಪಿ.ಎಸ್.ಬಿ ಸರಬರಾಜು, ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು, ಎನ್.ಪಿ.ವಿ, ಕೃಷಿ ಉಪಕರಣಗಳ ಸರಬರಾಜು, ತುಂತುರು ನೀರಾವರಿ, ನೀರು ಒದಗಿಸುವ ಪೈಪುಗಳ ವಿತರಣೆ, ಇತರೆ.

**4. ಕೃಷಿ ಭಾಗ್ಯ: (2401–00–102–0–27) : ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.25000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. 2017–18 ನೇ ಸಾಲಿನಿಂದ ಯೋಜನೆಯ ಸೌಲಭ್ಯವನ್ನು ಕರಾವಳಿ ಮತ್ತು ಮಲೆನಾಡು ಪ್ರದೇಶಗಳು ಒಳಗೊಂಡಂತೆ (ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ) ರಾಜ್ಯದ ಎಲ್ಲ ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ. ಕೃಷಿ ಭಾಗ್ಯ ಯೋಜನೆಯ ವಿವಿಧ ಘಟಕಗಳಾದ ನೀರು ಸಂಗ್ರಹಣಾ ರಚನೆಗಳು [ಕೃಷಿ ಹೊಂಡ], ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿ, ನೀರು ಎತ್ತಲು ಡೀಸಲ್ ಪಂಪ್‌ಸೆಟ್ , ನೀರು ಹಾಯಿಸಲು ಲಘು ನೀರಾವರಿ ಘಟಕ, ಕೃಷಿ ಹೊಂಡದ ಸುತ್ತಲೂ ನೆರಳು ಪರದೆ (Shadenet), ಮತ್ತು **ಒಣ ಬೇಸಾಯ ಪದ್ಧತಿ**( Recharge of functional borewells) ಅನುಷ್ಠಾನಕ್ಕೆ ಒದಗಿಸಲಾಗುವುದು.(ಈ ಘಟಕವನ್ನು ವಿಶೇಷ ಪ್ಯಾಕೇಜ್ ತಾಲ್ಲೂಕುಗಳಿಗೆ ಸೀಮಿತಗೊಳಿಸಲಾಗಿದೆ.)

**5. ಇತರೆ ಕೃಷಿ ಯೋಜನೆಗಳು: (2401–00–102–0–28): ಒಟ್ಟು ಆಯವ್ಯಯ : ರೂ.9119.00 ಲಕ್ಷಗಳು**

**ಅ. ಸಮಿತಿಗಳು ಮತ್ತು ಸಮಾಲೋಚನೆಗಳು:** ಕೃಷಿ ಇಲಾಖೆಯು ಏರ್ಪಡಿಸುವ ಕಾರ್ಯಾಗಾರಗಳು, ಆಂದೋಲನಗಳು, ಸಮಿತಿಗಳ ಸಭೆಗಳು, ಇತ್ಯಾದಿಗಳ ಕಾರ್ಯನಿರ್ವಹಣೆಯು ಸುಲಲಿತವಾಗುವ ಸಲುವಾಗಿ ಅವುಗಳ ವೆಚ್ಚವನ್ನು ಭರಿಸುವುದು ಹಾಗೂ ಸಭೆಗಳಿಗೆ ಕಾಫಿ/ಟೀ/ಲಘು ಉಪಹಾರ ವೆಚ್ಚಗಳನ್ನು ಭರಿಸುವುದು. "ಕರ್ನಾಟಕ ರಾಜ್ಯ ರೈತರ ಸಲಹಾ ಸಮಿತಿ"

ಸಭೆಗಳಿಗೆ ಕಾಫಿ/ಟೀ/ಲಘು ಉಪಹಾರ ವೆಚ್ಚಗಳು **ರೂ.50.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಆ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರಧನ ಮತ್ತು ಹಾವು ಕಡಿತಕ್ಕೆ ಪರಿಹಾರ** : ಈ ಕಾರ್ಯಕ್ರಮದಡಿ ಸಾಲದ ಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳೀಗೆ ರೂ.5.00 ಲಕ್ಷ ಪರಿಹಾರ ಧನವನ್ನು ನೀಡಲಾಗುವುದು. ಹಾವು ಕಡಿತದಿಂದ, ಮರಗಳಿಂದ ಬಿದ್ದು ಹಾಗೂ ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಪ್ರತಿ ಅರ್ಹ ಕುಟುಂಬಕ್ಕೆ ರೂ.2.00 ಲಕ್ಷ ಪರಿಹಾರ ಧನ ಹಾಗೂ ಬೆಂಕಿ ಆಕಸ್ಮಿಕದಿಂದ ಹುಲ್ಲು ಮೆದೆ/ ಬಣವೆಗಳು ನಷ್ಟವಾದಲ್ಲಿ ಗರಿಷ್ಠ ರೂ.20,000/– ಸಹಾಯಧನ ನೀಡಲಾಗುವುದು. **ರೂ.5500.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಇ. ಕೃಷಿ ಪಶಸ್ತಿ ಹಾಗೂ ಕೃಷಿ ಪಂಡಿತ್ ಪ್ರಶಸ್ತಿ** : ರೈತರಿಗೆ ಉತ್ಪಾದನಾ ಬಹುಮಾನಗಳು–ರಾಜ್ಯದ ರೈತರಲ್ಲಿ ಹೆಚ್ಚಿನ ಉತ್ಪಾದನೆ ಮಾಡುವ ಮನೋಭಾವ ಉಂಟುಮಾಡಲು ತಾಲ್ಲೂಕುಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಬೆಳೆ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ನೀಡುವುದು. ಕೃಷಿ ಕ್ಷೇತ್ರದಲ್ಲಿ ಅಮೂಲ್ಯ ಅನ್ವೇಷಣೆ ಹಾಗೂ ಸೃಜನಾತ್ಮಕ ಕಾರ್ಯಗಳನ್ನು ಕೈಗೊಂಡ ರೈತರನ್ನು ಗುರುತಿಸಿ ಅವರುಗಳಿಗೆ ಪ್ರಶಸ್ತಿ ನೀಡುವುದು. ರಾಜ್ಯಮಟ್ಟದ ವಿಜೇತರನ್ನು ಸನ್ಮಾನಿಸುವ

ಸಂಬಂಧ ತಗಲುವ ಎಲ್ಲಾ ವೆಚ್ಚಗಳನ್ನು ಭರಿಸುವುದು (ಬಹುಮಾನ, ಸಮಾರಂಭ ಆಯೋಜನೆ, ಇತ್ಯಾದಿ). **ರೂ.109.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಈ. ಬೆಳೆ ಸಾಲಕ್ಕೆ ಸಹಾಯಧನ:** ರಾಜ್ಯದ ರೈತರಿಗೆ ನೀಡಿದ ಬೆಳೆ ಸಾಲ/ಅಲ್ಪಾವಧಿ ಸಾಲಕ್ಕೆ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದ ರೈತರಿಗೆ ಶೇ.1ರ ಬಡ್ಡಿ ರಿಯಾಯಿತಿ ನೀಡಲು (ಸರ್ಕಾರಿ ಸ್ವಾಮ್ಯದ ವಾಣಿಜ್ಯ ಬ್ಯಾಂಕುಗಳು ಹಾಗು ಪ್ರಾದೇಶಿಕ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮೂಲಕ ಗರಿಷ್ಟ ರೂ. 1.00 ಲಕ್ಷ ಮಿತಿಯೊಳಗೆ) ಬಳಸಿಕೊಳ್ಳಲಾಗುತ್ತಿದೆ. ಶೂನ್ಯ ಬಡ್ಡಿಯಲ್ಲಿ ರೂ. 3.00 ಲಕ್ಷದವರೆಗೆ ಮತ್ತು ಶೇ. 3 ರ ಬಡ್ಡಿ ದರದಲ್ಲಿ ರೂ. 10.00 ಲಕ್ಷದವರೆಗೆ ರೈತರಿಗೆ ಬೆಳೆ ಸಾಲ ನೀಡಲಾಗುತ್ತಿದೆ. **ರೂ1000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಉ. ಆಹಾರ ಸಂಸ್ಕರಣೆಗೆ ಮತ್ತು ಕೃಷಿ ಬಂಡವಾಳ ಹೂಡಿಕೆ :** ಈ ಕಾರ್ಯಕ್ರಮದಡಿ ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಮೂಲ ಸೌಕರ್ಯವನ್ನು ಒದಗಿಸಲು, ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು, ಶೀತಲ ಗೃಹಗಳ ನಿರ್ಮಾಣ, ಉಗ್ರಾಣ ನಿರ್ಮಾಣ ಹಾಗೂ ಮಾರುಕಟ್ಟೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಹಾಗೂ ಇತರೆ ಸಂಬಂಧಿತ ಚಟುವಟಿಕೆಗಳನ್ನು ಕೈಗೊಳ್ಳುವುದು. **ರೂ.2100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಊ. ಕೃಷಿ ಬೆಲೆ ಆಯೋಗ:** ಕೃಷಿ ಉತ್ಪನ್ನಗಳಿಗೆ ಪ್ರತಿಫಲ ಬೆಲೆ ಒದಗಿಸುವುದು, ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಹೆಚ್ಚಿನ ಉತ್ಪಾದನೆ ಸಮಯದಲ್ಲಿ ಮಾರುಕಟ್ಟೆ ಮಧ್ಯಪ್ರವೇಶ, ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ ಚೌಕಾಶಿ ಸಾಮರ್ಥ್ಯ ಮತ್ತು ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರ ಮೂಲಕ ಕೃಷಿ ಸಮೂದಾಯದ ಮೂಲ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ ಆಯೋಗದ ಆಡಳಿತ ವೆಚ್ಚವನ್ನು ಭರಿಸಲಾಗುತ್ತಿದೆ. **ರೂ.350.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಋ.ನೆಲಗಡಲೆ ವಿಶೇಷ ಪ್ಯಾಕೇಜ್:** ನೆಲಗಡಲೆ ಬೆಳೆಯು ನಮ್ಮ ರಾಜ್ಯದ ಪ್ರಮುಖ ಬೆಳೆಯಾಗಿದ್ದು, ಮುಖ್ಯವಾಗಿ ಮಳೆಯಾಶ್ರಿತ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇತ್ತೀಚೆಗೆ ಎಣ್ಣೆಬೀಜ ಬೆಳೆ ಬೆಳೆಯುವ ಕ್ಷೇತ್ರವು ಇಳಿಮುಖವಾಗುತ್ತಿರುವ ಪ್ರವೃತ್ತಿಯನ್ನು ಸುಧಾರಿಸಲು ನೆಲಗಡಲೆ ಬೆಳೆ ಬೆಳೆಯುವ ರೈತರಿಗೆ ಸಹಾಯ ಮಾಡಲು ಮತ್ತು ಹೆಚ್ಚು ನೆಲಗಡಲೆಯನ್ನು ಉತ್ಪಾದಿಸಲು ನೆಲಗಡಲೆ ವಿಶೇಷ ಪ್ಯಾಕೇಜ್‌ನ್ನು ರೂಪಿಸಲಾಗಿದೆ. ವಿಶೇಷ ಪ್ಯಾಕೇಜ್‌ನ್ನು ಪ್ರಾರಂಭಿಕವಾಗಿ ತುಮಕೂರು ಜಿಲ್ಲೆಯ ಪಾವಗಡ, ಸಿರಾ ಮತ್ತು ಮಧುಗಿರಿ ತಾಲ್ಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಿಗೆ ಒದಗಿಸಲಾಗುವುದು. **ರೂ.10.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**6. ಬೀಜ ಕ್ಷೇತಗಳು (2401-00-103-0-01): ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.492.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಕೃಷಿ ಉತ್ಪಾದನೆಯಲ್ಲಿ ಬೀಜವು ಮುಖ್ಯವಾದ ಪರಿಕರವಾಗಿದ್ದು, ಉತ್ಪಾದನೆಯಲ್ಲಿ ಮಹತ್ವವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದ, ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳ ಬಳಕೆಯು ಅತ್ಯಾವಶ್ಯಕವಾಗಿದೆ.

ಬೀಜೋತ್ಪಾದನೆಯು ಮುಖ್ಯವಾಗಿ ತಳಿವರ್ಧಕ, ಮೂಲ ಹಾಗೂ ಪ್ರಮಾಣಿತ ಬೀಜಗಳ ಉತ್ಪಾದನೆಯನ್ನು ಒಳಗೊಂಡಿದೆ. ತಳಿವರ್ಧಕ ಬೀಜೋತ್ಪಾದನೆಯನ್ನು ಕೃಷಿ ವಿಶ್ವವಿದ್ಯಾನಿಲಯಗಳ ಸಂಶೋಧನಾ ಕೇಂದ್ರಗಳು ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ತುಗಳು ನಿರ್ವಹಿಸುತ್ತಿವೆ. ಮೂಲ ಬೀಜೋತ್ಪಾದನೆಯನ್ನು ಇಲಾಖೆಯ ಕೃಷಿ ಕ್ಷೇತ್ರಗಳಲ್ಲಿ, ಕರ್ನಾಟಕ ರಾಜ್ಯ ಬೀಜ ನಿಗಮ, ಎಣ್ಣೆಕಾಳು ಮಹಾಮಂಡಳಿ ಹಾಗೂ ರಾಷ್ಟ್ರೀಯ ಬೀಜ ನಿಗಮಗಳ ನೋಂದಾಯಿತ ಬೀಜೋತ್ಪಾದಕರುಗಳ ಕ್ಷೇತ್ರಗಳಲ್ಲಿ ಮತ್ತು ಖಾಸಗಿ ಸಂಸ್ಥೆಗಳ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗುತ್ತಿದೆ. ಇದೇ ರೀತಿ

ಪ್ರಮಾಣಿತ ಬೀಜೋತ್ಪಾದನೆಯನ್ನು ಕರ್ನಾಟಕ ರಾಜ್ಯ ಬೀಜ ನಿಗಮ, ಎಣ್ಣೆಕಾಳು ಮಹಾಮಂಡಳಿ, ರಾಷ್ಟ್ರೀಯ ಬೀಜ ನಿಗಮ ಮತ್ತು ಖಾಸಗಿ ಸಂಸ್ಥೆಗಳು ಕೈಗೊಂಡು, ಆ ಬೀಜಗಳನ್ನು ರೈತರಿಗೆ ಸರಬರಾಜು ಮಾಡುತ್ತಿವೆ.

ಈ ಯೋಜನೆಯಡಿ ಬೀಜೋತ್ಪಾದನೆಗೆ ಅಗತ್ಯವಾದ ಎಲ್ಲಾ ಸಾಗುವಳಿ ಖರ್ಚುಗಳನ್ನು ನಿರ್ವಹಿಸುವುದು, ಸಿಬ್ಬಂದಿ ವೇತನ ಮತ್ತು ಭತ್ಯೆಗಳನ್ನು ಭರಿಸುವುದು ಹಾಗೂ ಅಗತ್ಯ ಕಛೇರಿ ವೆಚ್ಚಗಳನ್ನು ನಿರ್ವಹಿಸುವುದು. ಬೀಜ ಪರೀಕ್ಷಾ ಪ್ರಯೋಗಾಲಯಗಳು, ಹೆಬ್ಬಾಳ, ಧಾರವಾಡ, ದಾವಣಗೆರೆ, ಗಂಗಾವತಿಯಲ್ಲಿ ಬಿತ್ತನೆ ಬೀಜಗಳ ಗುಣಮಟ್ಟವನ್ನು ನಿರ್ಧರಿಸುವುದು ಹಾಗೂ ಕಳಪೆ ಬೀಜಗಳನ್ನು ಮಾರಾಟಮಾಡುವ ಮಾರಾಟಗಾರರ ಮೇಲೆ ಕ್ರಮ ತೆಗೆದುಕೊಳ್ಳಲು ನೆರವಾಗುತ್ತಿದೆ ಹಾಗೂ ಬೀಜ ಪರೀಕ್ಷೆಗೆ ಅಗತ್ಯವಾದ ಎಲ್ಲಾ ಖರ್ಚುಗಳನ್ನು ನಿರ್ವಹಿಸುವುದು, ಸಿಬ್ಬಂದಿ ವೇತನ ಮತ್ತು ಭತ್ಯೆಗಳನ್ನು ಭರಿಸುವುದು ಹಾಗೂ ಅಗತ್ಯ ಕಛೇರಿ ವೆಚ್ಚಗಳನ್ನು ನಿರ್ವಹಿಸುವುದು.

**7. ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ: (2401–00–103–0–15): ಒಟ್ಟು ಆಯವ್ಯಯ : ರೂ.62823.00 ಲಕ್ಷಗಳು**

**1. ವೇತನ ಹಾಗೂ ಪ್ರಯೋಗಶಾಲೆ ವೆಚ್ಚಗಳು ( FCL/BCL/ ICL/PRAL) :** ಈ ಕಾರ್ಯಕ್ರಮದಡಿ ,ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ಜೈವಿಕ ನಿಯಂತಣ ಪಯೋಗಾಲಯ, ಕೀಟನಾಶಕ ನಿಯಂತಣ ಪ್ರಯೋಗಾಲಯಗಳ– ಜೈವಿಕ ಗೊಬ್ಬರ ಮತ್ತು ಸಾವಯವ ಗೊಬ್ಬರಗಳ ಗುಣ ನಿಯಂತ್ರಣ ಪ್ರಯೋಗಾಲಯಗಳು, ಹಾಗೂ ಪೀಡೆನಾಶಕ ಶೇಷಾಂಶ ವಿಶ್ಲೇಷಣಾ ಪ್ರಯೋಗಾಲಯ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುವ ಕಾರ್ಯನಿರ್ವಹಿಸುತಿರುವ ಅಧಿಕಾರಿ ಸಿಬ್ಬಂದಿ ವೇತನ ಇತರೆ ಭತ್ಯೆಗಳು ಮತ್ತು ಪ್ರಯಾಣ ವೆಚ್ಚಗಳು ಹಾಗೂ 'ಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವೇತನ, ಭತ್ಯೆಗಳು ಹಾಗೂ ಅಗತ್ಯ ಕಛೇರಿ ವೆಚ್ಚಗಳನ್ನು ನಿರ್ವಹಿಸುವುದು. ಕೀಟನಾಶಕ ಮಾದರಿಗಳ ವಿಶ್ಲೇಷಣೆಗೆ ತಗಲುವ ಎಲ್ಲಾ ಖರ್ಚುಗಳನ್ನು ನಿರ್ವಹಿಸುವುದು. ಜೈವಿಕ ಗೊಬ್ಬರ ಉತ್ಪಾದನಾ ಪ್ರಯೋಗಾಲಯ ಬೆಂಗಳೂರು, ದಾವಣಗೆರೆ ಹಾಗೂ ಧಾರವಾಡ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆಗಳು, ಪ್ರಯಾಣ ವೆಚ್ಚಗಳು , ಸಾಮಾನ್ಯ ವೆಚ್ಚಗಳು, ಇತರೆ ಖರ್ಚುಗಳು ನಿರ್ವಹಣೆಗಾಗಿ , ಕಛೇರಿ ವೆಚ್ಚ, ವಿದ್ಯುತ್ ಮತ್ತು ನೀರಿನ ದರಗಳ ಪಾವತಿಗಾಗಿ ಅನುದಾನ ಉದ್ದೇಶಿಸಲಾಗಿದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.1803.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**2. ಮಣ್ಣು ಆರೋಗ್ಯ ಅಭಿಯಾನ:** ರಾಜ್ಯದ ಎಲ್ಲಾ ರೈತ ಹಿಡುವಳಿದಾರರಿಗೆ ಪ್ರತಿ 2 ವರ್ಷಗಳಿಗೊಮ್ಮೆ ಮಣ್ಣು ಆರೋಗ್ಯ ಚೀಟಿ ವಿತರಿಸುವುದು ಹಾಗೂ ಪೋಷಕಾಂಶಗಳ ಕೊರತೆ ನೀಗಿಸಲು, ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರ ಬಳಕೆ ಮಾಡಲು ಅಭಿಯಾನ ರೂಪದಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಇಲಾಖೆಯ ಪರೀಕ್ಷಾ ಪ್ರಯೋಗಾಲಯಗಳಲ್ಲಿ ಮಣ್ಣು ಮಾದರಿಗಳಲ್ಲಿ ವಿಶ್ಲೇಷಣೆಗಾಗಿ ಮಣ್ಣು ಆರೋಗ್ಯ ಚೀಟಿ ಯೋಜನೆಯ ಘಟಕಗಳ ಅನುಷ್ಠಾನಕ್ಕಾಗಿ, ಹೊರಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡಿರುವ ಸಿಬ್ಬಂದಿಗಳಿಗೆ ವೇತನ ಪಾವತಿಗಾಗಿ ಮತ್ತು GIS-GPS ಸೇವೆಗಳನ್ನು ಪಡೆಯಲು, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಅನುದಾನವನ್ನು ನೀಡಲು, ಕೇಂದ್ರಗಳ ವಿದ್ಯುತ್, ನೀರು, ಬಾಡಿಗೆ ವೆಚ್ಚ, ತೆರಿಗೆ, ಪರಿಕರಗಳ ಖರೀದಿ, ಸ್ಥಾನಿಕ ಮಣ್ಣು ಆರೋಗ್ಯ ಕೇಂದ್ರಗಳಿಗೆ ಕಾಮಗಾರಿ, ರಿಪೇರಿ ಮತ್ತು ನವೀರಕಣಕ್ಕಾಗಿ ಉಪಯೋಗಿಸಿಕೊಳ್ಳಲಾಗುವುದು. ಬೆಳಗಾವಿ ಜಿಲ್ಲೆಯ ಸಂಚಾರಿ ಮಣ್ಣು ಪ್ರಯೋಗಾಲಯಕ್ಕೆ ಇಂಧನ ಮತ್ತು ನಿರ್ವಹಣೆಗಾಗಿ ಅನುದಾನವನ್ನು ನೀಡಲು ಉಪಯೋಗಿಸಿಕೊಳ್ಳಲಾಗುತ್ತಿದೆ. **ರೂ.1482.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**3. ಬೀಜಗಳ ಪೂರೈಕೆ:** ಈ ಕಾರ್ಯಕ್ರಮದಡಿ ರಾಜ್ಯದ ಸಾಮಾನ್ಯ ವರ್ಗದ ರೈತರಿಗೆ ಶೇ.50 ರ ರಿಯಾಯಿತಿ ದರದಲ್ಲಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಶೇ. 75ರ ರಿಯಾಯಿತಿ ದರದಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ, ಹೆಸರು, ಉದ್ದು, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ, ಸೋಯಾ ಅವರೆ, ಹತ್ತಿ ಇತ್ಯಾದಿ ಬೆಳೆಗಳ ಪ್ರಮಾಣಿತ/ನೀಜಚೀಟಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡುವುದು. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.16000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**4. ಬೀಜ ಹಾನಿ ನಿಧಿ/ KSSC,KSSOCA –** ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಪೂರೈಸಿದ ಬಿತ್ತನೆ ಬೀಜಗಳು ಕಾರಣಾಂತರಗಳಿಂದ ರೈತರಿಗೆ ವಿತರಣೆಯಾಗದೆ ಬೀಜೇತರ ಉದ್ದೇಶಕ್ಕಾಗಿ ವಿಲೇವಾರಿ ಮಾಡಿದಲ್ಲಿ ವಿಲೇವಾರಿ ಮಾಡಿದ ದರ ಮತ್ತು ಬಿತ್ತನೆ ಬೀಜದ ವ್ಯತ್ಯಾಸದ ದರವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಪಾವತಿಸುವುದು ಹಾಗೂ ಕೆ.ಎಸ್.ಎಸ್.ಸಿ, ಕೆ.ಎಸ್.ಎಸ್.ಓ.ಸಿ.ಎ ಗೆ ಬಿತ್ತನೆ ಬೀಜಗಳ ಗುಣಮಟ್ಟದ ಪ್ರಮಾಣೀಕರಣ ಹಾಗೂ ದೃಢೀಕರಣಕ್ಕಾಗಿ ಸಹಾಯಧನ ಒದಗಿಸಲಾಗಿದೆ. ಕರ್ನಾಟಕ ರಾಜ್ಯ ಬೀಜ ಪ್ರಮಾಣೀಕರಣ ಸಂಸ್ಥೆಯ ಉನ್ನತೀಕರಣಕ್ಕಾಗಿ ಹಾಗೂಕರ್ನಾಟಕ ರಾಜ್ಯ ಬೀಜ ನಿಗಮಕ್ಕೂ ಸಹ ಅಭಿವೃದ್ಧಿ ಕಾರ್ಯಗಳಿಗೆ ಆಡಳಿತಾತ್ಮಕ ವೆಚ್ಚವನ್ನು ಭರಿಸಲಾಗುತ್ತಿದೆ. ಈ ಕಾರ್ಯಕ್ರಮದ ಅನುಷ್ಠಾನಕ್ಕೆ **ರೂ.2000.00**ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

**5. ಸಸ್ಯ ಸಂರಕ್ಷಣೆ –** ಈ ಕಾರ್ಯಕ್ರಮದಡಿ ರಾಜ್ಯದಲ್ಲಿ ಬೆಳೆಯುವ ಕೃಷಿ ಬೆಳೆಗಳನ್ನು ಬಾಧಿಸುವ ಕೀಟ/ರೋಗಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಸಂಗ್ರಹಿಸಿದ ಧಾನ್ಯಗಳನ್ನು ಕೀಟ/ರೋಗಗಳಿಂದ ಸಂರಕ್ಷಿಸಲು ಅಗತ್ಯವಾದ ತಾಂತ್ರಿಕತೆ/ತಂತ್ರಜ್ಞಾನ ನೀಡುವುದು. ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಬೀಜ, ರಸಗೊಬ್ಬರ ಮತ್ತು ಕೀಟನಾಶಕ ಕಾಯ್ದೆ ಮತ್ತು ಕಾನೂನು ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಗುಣ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಹಾಗೂ ಬೀಜೋಪಚಾರ ಆಂದೋಲನ ಮತ್ತು ಸುರಕ್ಷಿತ ಕೀಟನಾಶಕಗಳ ಬಳಕೆ ಕುರಿತು ತರಬೇತಿಗೆ ಹಾಗೂ ರಿಯಾಯಿತಿಯಲ್ಲಿ ಜೈವಿಕ ಪೀಡೆನಾಶಕ, ಜೈವಿಕ ನಿಯಂತ್ರಣಾಕಾರಕಗಳ, ವೈಜ್ಞಾನಿಕ ಧಾನ್ಯ ಸಂಗ್ರಹಣೆಗಾಗಿ ಸುಧಾರಿತ ಪೆಟ್ಟಿಗೆಗಳ, ಅವಶ್ಯಕತೆಗೆ ಅನುಗುಣವಾಗಿ ಕೀಟ/ ರೋಗ ನಿರ್ವಹಣೆಗೆ ಶೇ.50ರ ರಿಯಾಯಿತಿಯಲ್ಲಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಶೇ.75ರ ರಿಯಾಯಿತಿ ದರದಲ್ಲಿ ಪೀಡೆನಾಶಕಗಳ ವಿತರಣೆಗೆ ಅನುದಾನ ಬಳಕೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.981.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**6. ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ:** ಈ ಕಾರ್ಯಕ್ರಮದಡಿ ರಸಗೊಬ್ಬರಗಳನ್ನು ಮುಂಗಡವಾಗಿ ದಾಸ್ತಾನು ಮಾಡಲು, ರಸಗೊಬ್ಬರ ಖರೀದಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ನಿಯಮಿತರವರು ಪಡೆದಿರುವ ಸಾಲದ ಮೇಲಿನ ಬಡ್ಡಿ, ರಸಗೊಬ್ಬರದ ಶೇಖರಣಾ ವೆಚ್ಚ, ರಸಗೊಬ್ಬರದ ಹಮಾಲಿ, ಸಾಗಾಣಿಕೆ ಮತ್ತು ನಿರ್ವಹಣೆ ವೆಚ್ಚಗಳನ್ನು ಭರಿಸಲಾಗುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.4048.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**7. ಮಣ್ಣಿನ ಸತ್ವ ಹೆಚ್ಚಿಸುವಿಕೆ:** ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಹೆಚಿಸಲು ರಿಯಾಯಿತಿ ದರದಲ್ಲಿ ಕೃಷಿ ಪರಿಕರಗಳ ವಿತರಣೆ (ಹಸಿರೆಲೆ ಗೊಬ್ಬರ ಬೀಜ, ಜಿಪ್ಸಂ / ಕೃಷಿ ಸುಣ್ಣ, ಲಘು ಪೋಷಕಾಂಶಗಳು, ಜೈವಿಕ ಗೊಬ್ಬರಗಳು), ಸಾವಯವ ಗೊಬ್ಬರಗಳ ವಿತರಣೆ (ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್), ಖಾದ್ಯವಲ್ಲದ ಎಣ್ಣೇ ರಹಿತ ಹಿಂಡಿ ಗೊಬ್ಬರಗಳು ವಿತರಣೆ.ಸಾವಯವ ಗೊಬ್ಬರಗಳ ಉತ್ಪಾದನೆಗೆ ಪ್ರೋತ್ಸಾಹಧನ (ಬಯೋಡೈಜೆಸ್ಟರ್ ಘಟಕ ಸ್ಥಾಪನೆ, ಕಡಿಮೆ ವೆಚ್ಚದ ಎರೆಹುಳು ಗೊಬ್ಬರ ಉತ್ಪಾದನಾ ಘಟಕ ಸ್ಥಾಪನೆ). ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಶೇ. 75ರ ರಿಯಾಯಿತಿ ದರದಲ್ಲಿ ಮೇಲಿನ ಕೃಷಿ ಪರಿಕರಗಳ ವಿತರಣೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.3000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**8. ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣೆ :** ಈ ಯೋಜನೆಯಡಿ ರೈತರಿಗೆ ಸಣ್ಣ ಟ್ರಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ/ಬಿತ್ತನೆ ಉಪಕರಣಗಳು, ಕುಯ್ಲು ಮತ್ತು ಒಕ್ಕಣೆ ಉಪಕರಣಗಳು, ಡೀಸೆಲ್ ಪಂಪು ಸೆಟ್ಟು, ಅಂತರ ಬೇಸಾಯ ಉಪಕರಣಗಳು ಹಾಗೂ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಕೃಷಿ ಸಂಸ್ಕರಣೆ ಘಟಕಗಳು ಹಾಗೂ ಟಾರ್ಪಾಲಿನ್ ಸಹಾಯಧನದಡಿ ವಿತರಿಸಲಾಗುತ್ತಿದೆ. ರೂ.2.00 ಲಕ್ಷದವರೆಗೆ ಇರುವ ಕೃಷಿ ಯಂತ್ರೋಪಕರಣಗಳನ್ನು ಪ್ರತಿ ರೈತ ಫಲಾನುಭವಿಗಳಿಗೆ ನೀಡಲಾಗುತ್ತಿದ್ದು, ಸಾಮಾನ್ಯ ವರ್ಗದ ರೈತರಿಗೆ ಶೇ.50 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ಹಾಗೂ ಸಣ್ಣ ಟ್ರಾಕ್ಟರ್‌ಗಳಿಗೆ ರೂ.75,000/– ಸಹಾಯಧನ ನೀಡಲಾಗುತ್ತಿದೆ. ರೂ.5.00ಲಕ್ಷದವರೆಗೆ ಇರುವ ಕೃಷಿ ಉಪಕರಣಗಳನ್ನು ನೋಂದಾಯಿತ ರೈತ ಗುಂಪುಗಳಿಗೆ ಹಾಗೂ ಎಲ್ಲಾ ತರಹದ ಉಪಕರಣಗಳನ್ನು ಬಾಡಿಗೆ

ಆಧಾರಿತ ಸೇವಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಸಣ್ಣ ಟ್ರಾಕ್ಟರ್‌ಗಳಿಗೆ ರೂ.2.00 ಲಕ್ಷ ಸಹಾಯಧನ ಹಾಗೂ ಉಳಿದ ಕೃಷಿ ಉಪಕರಣಗಳಿಗೆ ಮತ್ತು ಕೃಷಿ ಸಂಸ್ಕರಣೆ ಘಟಕಗಳು ಹಾಗೂ ಟಾರ್ಪಾಲಿನ್‌ಗಳನ್ನು ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.1.00 ಲಕ್ಷದವರೆಗೆ ನೀಡಲಾಗುವುದು. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ. 22572.34 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**9. ಕೃಷಿ ಯಂತ್ರಧಾರೆ :** ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸುವುದು. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.2816.66 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**10**. ***ಕೃಷಿ ಯಂತ್ರೋಪಕರಣ ಸೇವಾ ಕೇಂದ್ರ:*** ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಉತ್ತೇಜಿಸಿ ಯುವ ರೈತರನ್ನು ಕೃಷಿಯತ್ತ ಸೆಳೆದು ಉದ್ಯೋಗಾವಕಾಶ ಸೃಜಿಸಲು ಹಾಗೂ ಸ್ಥಳೀಯವಾಗಿ ಕೃಷಿ ಉಪಕರಣಗಳ ದುರಸ್ತಿಗಾಗಿ ಹಾಗೂ ಲಘು ಉಪಕರಣಗಳ ತಯಾರಿಕೆಗಾಗಿ "ಗ್ರಾಮೀಣ ಕೃಷಿ ಯಂತ್ರೋಪಕರಣ ದುರಸ್ತಿ ಸೇವಾ ಕೇಂದ್ರ ಸ್ಥಾಪನೆಗಾಗಿ ಅನುದಾನ ಬಳಕೆ.

**11.ವಿಶೇಷ ಅಭಿವೃದ್ಧಿ ಯೋಜನೆ :** ಕರ್ನಾಟಕ ಸರ್ಕಾರವು ಡಾಃ ಡಿ.ಎಂ.ನಂಜುಂಡಪ್ಪರವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನ ನಿರ್ವಹಣಾ ಉನ್ನತ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ರಾಜ್ಯದಲ್ಲಿ 114 ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ ವರದಿ ನೀಡಿದೆ. ಅದರಲ್ಲಿ 39 ತಾಲ್ಲೂಕುಗಳು ಅತ್ಯಂತ ಹಿಂದುಳಿದಿದ್ದು 40 ತಾಲ್ಲೂಕುಗಳು ಅತಿ ಹಿಂದುಳಿದಿದ್ದು ಹಾಗೂ 35 ತಾಲ್ಲೂಕುಗಳು ಹಿಂದುಳಿದಿವೆ. ಈ ಹಿಂದುಳಿದ ತಾಲ್ಲೂಕುಗಳಿಗೆ ವಿಶೇಷ ಅಭಿವೃದ್ದಿ ಅನುದಾನವನ್ನು ಒದಗಿಸಲಾತರುತ್ತದೆ. **2019-20ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ ಕಾರ್ಯಕ್ರಮದಡಿ ರೂ.6320.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ.**

**12**. ಬೃಹತ್ ಎಣ್ಣೆ ತಯಾರಿಕಾ ಕಂಪನಿಗಳಿಗೆ ಪರ್ಯಾಯವಾಗಿ ರೈತರಿಗೆ ಸಣ್ಣ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ನೀಡಿ ಪರಿಶುದ್ಧ ಹಾಗೂ ಆರೋಗ್ಯಪೂರ್ಣ ಎಣ್ಣೆ ಉತ್ಪಾದನೆ ಮಾಡಲು ಪ್ರೋತ್ಸಾಹ ನೀಡಲಾಗುವುದು. ಈ ಪರಿಶುದ್ಧ ಎಣ್ಣೆಯ ಮಾರಾಟಕ್ಕಾಗಿ ನಂದಿನಿ ಮತ್ತು ಇ-ಮಾರ್ಕೆಟಿಂಗ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುದಾನ ಬಳಕೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.500.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

13.**ಕೃಷಿ ನವೋದ್ಯಮ** – ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ನೆರವಾಗುವ ಹೊಸ ಆವಿಷ್ಕಾರ/ತಂತ್ರಜ್ಞಾನಗಳನ್ನು ಬಳಸಿ ಉದ್ದಿಮೆ ಸ್ಥಾಪಿಸಲು ಅನುಷ್ಠಾನಗೊಳಿಸಲು ಅನುದಾನವನ್ನು ಬಳಸಲಾಗುವುದು.
**ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.500.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**14.ನಿರ್ವಾತ ತಂತ್ರಜ್ಞಾನ** (Vaccum Technology) :ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಮೆಣಸಿನಕಾಯಿ, ಕಾಳುಮೆಣಸು, ಗೋಡಂಬಿ, ಜೀರಿಗೆ, ಕೊತ್ತಂಬರಿ, ಮೆಂತ್ಯೆ ಬೆಳೆಗಳನ್ನು ದೀರ್ಘಕಾಲ ದಾಸ್ತಾನು ಮಾಡಲು ನಿರ್ವಾತ ತಂತ್ರಜ್ಞಾನವನ್ನು (Vaccum Technology) ಅಭಿವೃದ್ಧಿ ಪಡಿಸಲು ಹಾಗೂ ಈ ತಂತ್ರಜ್ಞಾನವನ್ನು ರೈತರ ಹಂತದಲ್ಲಿ ಪ್ರಚುರಪಡಿಸಲು ಅನುದಾನ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.300.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**15**. ***"ಕರಾವಳಿ ಪ್ಯಾಕೇಜ್"(ಹೊಸ ಕಾರ್ಯಕ್ರಮ) :*** ಕರಾವಳಿ ಹಾಗೂ ಮಲೆನಾಡಿನ ರೈತರನ್ನು ಉತ್ತಮವಾಗಿ ಭತ್ತವನ್ನು ಬೆಳೆಯಲು ಪ್ರೇರೇಪಿಸಲು ಹೆಕ್ಟೇರ್‌ಗೆ ರೂ.7500 ರಂತೆ ಪ್ರೋತ್ಸಾಹಧನವನ್ನು "ಕರಾವಳಿ/ಮಲೆನಾಡು ಪ್ರದೇಶಗಳ ಮಳೆಯಾಶ್ರಿತ ಭತ್ತದ ರೈತರಿಗೆ ಪ್ಯಾಕೇಜ್" ಎನ್ನುವ ಕಾರ್ಯಕ್ರಮದ ಮೂಲಕ ನೀಡಲು ಉದ್ದೇಶಿಲಾಗಿದ್ದು **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.500.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**8. ಕೃಷಿ ಕ್ಷೇತ್ರ ಮತ್ತು ಕೃಷಿ ಅಭಿವೃದ್ಧಿ ಕೇಂದ್ರಗಳು** (2401–00–104–0–10): **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.165.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಕೃಷಿ ಅಭಿವೃದ್ಧಿ ಕೇಂದ್ರಗಳು ಸಾಕಷ್ಟು ಜಮೀನು ಹೊಂದಿದ್ದು ಸೂಕ್ತವಾದ ಬೆಳೆ ಕಾರ್ಯಕ್ರಮಗಳನ್ನು ಹಾಗೂ ಬೀಜೋತ್ಪಾದನಾ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಕೇಂದ್ರಗಳಲ್ಲಿ ಉತ್ಪಾದನೆಯಾದ ಬೀಜಗಳು ಆಯಾ ಪ್ರದೇಶದ ರೈತರಿಗೆ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗಿದ್ದು ರೈತರಿಗೆ ಉನ್ನತ ತಾಂತ್ರಿಕ ಮಾಹಿತಿ ನೀಡುವಲ್ಲಿ ಕೃಷಿ ಅಭಿವೃದ್ಧಿ ಕೇಂದ್ರಗಳು ಸತತವಾಗಿ ಶ್ರಮಿಸುತ್ತಿವೆ. ಈ ಕಾರ್ಯಕ್ರಮದಡಿ ಕೃಷಿ ಕ್ಷೇತ್ರ/ಅಭಿವೃದ್ಧಿ ಕೇಂದ್ರಗಳ ಎಲ್ಲಾ ಸಾಗುವಳಿ ವೆಚ್ಚವನ್ನು ನಿರ್ವಹಿಸುವುದು, ಸಿಬ್ಬಂದಿ ವೇತನ ಮತ್ತು ಭತ್ಯೆಗಳನ್ನು ಭರಿಸುವುದು ಹಾಗೂ ಅಗತ್ಯ ಕಛೇರಿ ವೆಚ್ಚಗಳನ್ನು ನಿರ್ವಹಿಸುವುದು.

**9. ಸಾವಯವ ಕೃಷಿ: (2401–00–104–0–12) : ಈ ಕಾರ್ಯಕ್ರಮದ ಅನುಷ್ಟಾನಕ್ಕೆ ಒಟ್ಟಾರೆ, ರೂ.9700.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**I. ಸಾವಯವ ಗುಂಪು ಪ್ರಮಾಣೀಕರಣ:**

ಸಾವಯವ ಭಾಗ್ಯ ಯೋಜನೆಯನ್ನು ರಾಜ್ಯದ 566 ಹೋಬಳಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 53829 ರೈತರುಗಳನ್ನೊಳಗೊಂಡ 63677 ಹೆ. ಪ್ರದೇಶವನ್ನು ಸಾವಯವ ಕೃಷಿ ಪದ್ಧತಿಗೆ ಅಳವಡಿಸಲಾಗಿದೆ. ಯೋಜನಾ ಪ್ರದೇಶವನ್ನು ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆ (KSOCA) ಯ ಮುಖಾಂತರ ಸಾವಯವ ಗುಂಪು ಪ್ರಮಾಣೀಕರಣಕ್ಕೆ ಒಳಪಡಿಸಲಾಗಿದೆ. ಮುಂದುವರೆದು ರಾಜ್ಯದ ಸಾವಯವ ಉತ್ಪನ್ನಗಳಗೆ ವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸಲು ರಾಜ್ಯದ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ ರಾಜ್ಯಾದ್ಯಂತ 14 ಪ್ರಾಂತೀಯ ಸಾವಯವ ಕೃಷಿಕರ ಸಂಘಗಳ ಒಕ್ಕೂಟವನ್ನು ರಚಿಸಲಾಗಿರುತ್ತದೆ. ಈ ಒಕ್ಕೂಟಗಳ ಮುಖಾಂತರ ಸಾವಯವ ಕೃಷಿ ಉತ್ಪನ್ನಗಳ ಸಂಗ್ರಹಣೆ, ಗ್ರೇಡಿಂಗ್, ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್, ಬ್ರಾಂಡ್ ಅಭಿವೃದ್ಧಿ, ಮಾರುಕಟ್ಟೆ, ಬಳಕೆದಾರರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಈ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

**ಮಾರುಕಟ್ಟೆ ಆಧಾರಿತ ನಿರ್ದಿಷ್ಟ ಸಾವಯವ ಬೆಳೆ ಕ್ಲಸ್ಟರ್‌ಗಳ ಅಭಿವೃದ್ಧಿ ಕಾರ್ಯಕ್ರಮ:**

ರಾಜ್ಯದ ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳಡಿ ಈಗಾಗಲೇ ರಾಜ್ಯಾದ್ಯಂತ ಪ್ರಮಾಣೀಕೃತ ಸಾವಯವ ಕೃಷಿ ವ್ಯಾಪ್ತಿಗೆ ತರಲಾಗಿರುವ ಯೋಜನಾ ಪ್ರದೇಶಗಳಲ್ಲಿ ರಾಜ್ಯಾದ್ಯಂತ ಸ್ಥಾಪಿಸಲಾಗಿರುವ ಪ್ರಾಂತೀಯ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳ ಮುಖಾಂತರ ಮಾರುಕಟ್ಟೆ ಬೇಡಿಕೆ ಆಧಾರಿತ ನಿರ್ದಿಷ್ಟ ಸಾವಯವ ಬೆಳೆ ಕ್ಲಸ್ಟರ್‌ಗಳ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಕಾರ್ಯಕ್ರಮದಡಿಯಲ್ಲಿ ಸಾವಯವ ಕ್ಷೇತ್ರದಲ್ಲಿನ ಸಾಮರ್ಥ್ಯವುಳ್ಳ ಒಟ್ಟು 252 ಯೋಜನಾ ಪ್ರದೇಶಗಳಲ್ಲಿ (potential region) ಮಾರುಕಟ್ಟೆಗೆ ಒತ್ತು ನೀಡಿ ಉತ್ಪನ್ನ/ಬೆಳೆ ಯೋಜನೆಯನ್ನು ಕೈಗೊಂಡು ಗುಣಮಟ್ಟದ ಸಾವಯವ ಉತ್ಪನ್ನಗಳ ಸಮರ್ಪಕ ಹಾಗೂ ನಿರಂತರ ಪೂರೈಕೆಗಾಗಿ ಅವುಗಳ ಉತ್ಪಾದನೆ, ಸಂಗ್ರಹಣೆ, ವಿಂಗಡಣೆ, ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್, ಬ್ರ್ಯಾಂಡ್ ಅಭಿವೃದ್ಧಿ ಈ ಮುಂತಾದ ಚಟುವಟಿಕೆಗಳಿಗೆ ಬೆಂಬಲವನ್ನು ನೀಡುವ ಘಟಕಗಳೊಂದಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

**II.ಸಾವಯವ ಕೃಷಿ ಮತ್ತು ದೃಢೀಕರಣ–** 2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ಕೊಟ್ಟು ಪ್ರಸ್ತುತ ರಾಜ್ಯದಲ್ಲಿರುವ 1.00ಲಕ್ಷ ಹೆಕ್ಟೇರ್ ಪ್ರಮಾಣೀಕೃತ ಸಾವಯವ ಕೃಷಿ ಪ್ರದೇಶವನ್ನು ಮುಂದಿನ ಮೂರು ವರ್ಷಗಳಲ್ಲಿ 1.50 ಲಕ್ಷ ಹೆಕ್ಟರ್ ಪ್ರದೇಶಕ್ಕೆ ವಿಸ್ತರಿಸಲಾಗುವುದೆಂದು ಘೋಷಿಸಿರುವ ಹಿನ್ನಲ್ಲೆಯಲ್ಲಿ ರಾಜ್ಯದಲ್ಲಿ ಸಾವಯವ ಕೃಷಿ ಪ್ರಮಣೀಕೃತ ಪ್ರದೇಶವನ್ನು ಹೆಚ್ಚಿಸುವುದು ಹಾಗೂ ರಫ್ತು ಹಾಗು ದೇಶಿಯ ಮಾರುಕಟ್ಟೆಗಳಿಗೆ ಅಗತ್ಯವಿರುವ ಪ್ರಮಾಣ ಮತ್ತು ಉತ್ತಮ ಗುಣಮಟ್ಟದ ಸಾವಯವ ಉತ್ಪನ್ನಗಳನ್ನು ಉತ್ಪಾದಿಸಲು ಆಯಾ ಪ್ರದೇಶದ ಸಾಮರ್ಥ್ಯವಿರುವ ಒಂದು ಅಥವಾ ಎರಡು ಪ್ರಮುಖ ಬೆಳೆಗಳನ್ನು ಕೇಂದ್ರಿಕರಿಸಿ ರೈತ ಗುಂಪುಗಳ ಮೂಲಕ ಹೆಚ್ಚು ಪ್ರಮಾಣದ ಮತ್ತು ಗುಣಮಟ್ಟದ ಉತ್ಪಾದನೆಯನ್ನು ನಿರಂತರವಾಗಿ ಮಾರುಕಟ್ಟೆಗೆ ಹಾಗೂ ಗ್ರಾಹಕರಿಗೆ

ಒದಗಿಸುವುದು. ಸದರಿ ಕಾರ್ಯಕ್ರಮವನ್ನ ಕರ್ನಾಟಕ ರಾಜ್ಯ ಸಾವಯವ ಪ್ರಮಾಣೀಕರಣ ಸಂಸ್ಥೆಯ ಮುಖಾಂತರ ಯೋಜನಾ ಪ್ರಸ್ತಾವನೆ ಆಧಾರಿತ ಕಾರ್ಯಕ್ರಮವನ್ನಾಗಿ (Project Mode) ರಾಜ್ಯಾದ್ಯಂತ ಅನುಷ್ಠಾನಗೊಳಿಸುವುದು.(ಆಯವ್ಯಯದಲ್ಲಿ ಘೋಷಿಸಲಾಗಿರುವ ಹೊಸ ಕಾರ್ಯಕ್ರಮ) **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.2000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**III.ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ(ಹೊಸ ಕಾರ್ಯಕ್ರಮ) :** ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ (ZBNF) ಪದ್ಧತಿಯು ಅತಿಯಾದ ರಾಸಾಯನಿಕ ಬಳಕೆಯಿಂದ ಕೂಡಿರುವ ರಾಸಾಯನಿಕ ಕೃಷಿ 'ಹಾಗೂ ಪರಿಸರ ಸ್ನೇಹಿ ಸುಸ್ಥಿರ ಪದ್ಧತಿಯಾಗಿದ್ದರೂ ದುಬಾರಿ ಸಾವಯವ ಪರಿಕರ ಆಧಾರಿತ ಪದ್ಧತಿಯಾಗಿರುವ ಸಾವಯವ ಕೃಷಿ ಪದ್ಧತಿಗಳಿಂದ ವಿಭಿನ್ನವಾಗಿರುತ್ತದೆ (Paradigm shift). ಅತಿ ಅಲ್ಪ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆಯುವ ಲಾಭದಾಯಕ ಕೃಷಿ ಪದ್ಧತಿಯನ್ನು ಮಹಾರಾಷ್ಟ್ರದ ಪ್ರಗತಿಪರ ಕೃಷಿಕರಾದ ಶ್ರೀ ಸುಭಾಷ ಪಾಳೇಕರ್ ರವರು ಅಭಿವೃದ್ಧಿಪಡಿಸಿದ್ದು ಕಳೆದ ಹತ್ತು ವರ್ಷಗಳಿಂದ ಈ ಪದ್ಧತಿಯು ದೇಶಾದ್ಯಂತ ಅನುಚರಣೆಯಲ್ಲಿರುತ್ತದೆ.

ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಪದ್ಧತಿಯು ಇತ್ತೀಚಿಗೆ ವಿಶ್ವದೆಡೆ ಹೆಚ್ಚಿನ ಮಹತ್ವ ಹೊಂದುತ್ತಿರುವ Regenerative Agriculture ವ್ಯಾಪ್ತಿಯಡಿ ಸೇರಿರುತ್ತದೆ. ವಿಷಮುಕ್ತ ಮಣ್ಣು, ವಿಷಮುಕ್ತ ಬೆಳೆ, ವಿಷಮುಕ್ತ ಆಹಾರ, ವಿಷಮುಕ್ತ ಪರಿಸರ ನಿರ್ಮಾಣದ ಮೂಲಕ ಜನಾರೋಗ್ಯ ಮತ್ತು ಸಮಾಜದ ಸ್ವಸ್ಥ ಕಾಪಾಡುವುದು ಹಾಗೂ ರೈತರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದರೊಂದಿಗೆ ಬೇಸಾಯಕ್ಕೆ ಹೆಚ್ಚು ಹಣ ತೊಡಗಿಸದೆ ಸಾಂಪ್ರದಾಯಿಕ ಪದ್ಧತಿಯಲ್ಲಿ ಮಣ್ಣಿನ ಫಲವತ್ತೆಯನ್ನು ಹೆಚ್ಚಿಸಿ ಪೌಷ್ಟಿಕ ಹಾಗೂ ಗುಣಮಟ್ಟದ ಬೇಸಾಯದ ಮೂಲಕ ಬೆಳೆ ಬೆಳೆಯುವುದು. ಅಂದರೆ ರಾಸಾಯನಿಕ ಗೊಬ್ಬರ ಬಳಸದೆ ಕೀಟ ನಾಶಕ ಸಿಂಪಡಿಸದೆ ನೈಸರ್ಗಿಕವಾಗಿ ಲಭ್ಯವಾಗುವ ಸಗಣಿ, ಗಂಜಲ, ಬೆಲ್ಲ ಮತ್ತು ಇತರೆ ಪದಾರ್ಥಿಗಳಿಂದ ಬೆಳೆಗಳಿಗೆ ಅಗತ್ಯ ಪೋಷಕಾಂಶ ಒದಗಿಸುವುದು. ಕಡಿಮೆ ನೀರು ಮತ್ತು ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಸಿಗುವುದರಿಂದ ರೈತರ ಆದಾಯ ಹೆಚ್ಚಲಿದೆ.

ರೈತರಿಗೆ ಕೃಷಿ ಲಾಭದಾಯಕವಾಗಿರಬೇಕು ಹಾಗೂ ಜನರಿಗೆ ಆರೋಗ್ಯಕರ ಆಹಾರ ದೊರೆಯ ನಿಟ್ಟಿನಲ್ಲಿ ಶೂನ್ಯ ಬಂಡವಾಳ ಸಹಜ ಕೃಷಿ (Zero Budget Natural Farming) ಪದ್ಧತಿ ರೈತರಿಗೆ ಉಪಯೋಗವಾಗುತ್ತದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.4000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

IV.**ಸಾವಯವ ಮತ್ತು ಶೂನ್ಯ ಬಂಡವಾಳ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಘಟಕಗಳಿಗೆ ಪ್ರೋತ್ಸಾಹ ಯೋಜನೆ** : – ಸಾವಯವ ಉತ್ಪನ್ನಗಳನ್ನು ನಿರಂತರವಾಗಿ ಗ್ರಾಹಕರಿಗೆ ಲಭ್ಯವಾಗಿಸಲು ಹಾಗೂ ಸಾವಯವ ಉತ್ಪನ್ನಗಳ ಮಾರುಕಟ್ಟೆ ಬಲವರ್ಧನೆ,ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಸರಬರಾಜು ಸರಪಳಿಯ ಮೂಲಭೂತ ಸೌಕರ್ಯ (Value Chain) ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಪ್ರೋತ್ಸಾಹಧನ ನೀಡುವ ಮೂಲಕ ಉತ್ತೇಜಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.ಸದರೀಕಾರ್ಯಕ್ರಮದಡಿ ಸಾವಯವ ಮತ್ತು ಶೂನ್ಯ ಬಂಡವಾಳ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಗ್ ಘಟಕಗಳಿಗೆ ಪ್ರೋತ್ಸಾಹಧನ ನೀಡಲು ಉದ್ದೇಶಿಸಲಾಗಿದೆ. ಪ್ರಸ್ತಾವಿತ ಕಾರ್ಯಕ್ರಮದಡಿ ಅರ್ಹ ರೈತ ಉದ್ದಿಮೆದಾರರು/ನೊಂದಾಯಿತ ಸರ್ಕಾರೇತರ ಸಂಸ್ಥೆಗಳು–ರೈತ ಉತ್ಪಾದಕಾ ಗುಂಪುಗಳು/ ಖಾಸಗಿ ಉದ್ದಿಮೆದಾರರು/ನವೋದ್ಯಮಿಗಳಿಗೆ ಪ್ರೋತ್ಸಾಹಧನವನ್ನು ಒದಗಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮದ ಅನುಷ್ಟಾನಕ್ಕೆ **ರೂ.200.00**ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

**V.** ಸಿರಿಧಾನ್ಯ ಉತ್ತೇಜನಕ್ಕಾಗಿ **"ರೈತ ಸಿರಿ"** –ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು ಸಿರಿಧಾನ್ಯಗಳ ವಿಸ್ತೀರ್ಣವನ್ನು ವಿವಿಧ ಹಂಗಾಮುಗಳಲ್ಲಿ ಹೆಚ್ಚಿಸಲು ಒಟ್ಟಾರೆ 10.00 ಹೆಕ್ಟೇರ್ ಗಳಿಗೆ ಪ್ರತಿ ಹೆಕ್ಟೇರ್ 10,000 ರೂಗಳಂತೆ ರೈತರಿಗೆ ಅನುದಾನವನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗುವುದು. (ಆಯವ್ಯಯದಲ್ಲಿ ಘೋಷಿಸಲಾಗಿರುವ ಹೊಸ ಕಾರ್ಯಕ್ರಮ) ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.1000.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

**10. ಕೇಂದ್ರ ಪುರಸ್ಕೃತ ಯೋಜನೆ –ಎನ್.ಎಮ್.ಎಸ್.ಎ.–ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ (2401–00–108–1–15): 2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.36818.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ನೀರಿನ ಮಿತ ಬಳಕೆಯಿಂದ ಅಧಿಕ ಇಳುವರಿ ಪಡೆಯಲು ಹಾಗೂ ರಾಜ್ಯದಲ್ಲಿ ಲಘು ನೀರಾವರಿ ಪದ್ದತಿಯನ್ನು ಜನಪ್ರಿಯಗೊಳಿಸಲು ರಾಜ್ಯಾದ್ಯಂತ ಕೃಷಿ ಚಟುವಟಿಕೆಗಳಿಗೆ ಸಹಾಯವಾಗುವಂತೆ ಸೂಕ್ಷ್ಮ ನೀರಾವರಿ ಘಟಕಗಳನ್ನು ಕಡಿಮೆ ವೆಚ್ಚದಲ್ಲಿ ಎಲ್ಲಾ ವರ್ಗದ ರೈತರಿಗೆ ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರು ಶಕ್ತ ವೆಚ್ಚದಲ್ಲಿ ಪಡೆಯುವಂತೆ ಮಾಡಲು ಬಳಸಿಕೊಳ್ಳಲು ಮತ್ತು ಹೆಚ್ಚಿನ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಗಳಿಸಲು ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆಯನ್ನು ಕೇಂದ್ರವಲಯದ ಅನುದಾನದೊಂದಿಗೆ ರಾಜ್ಯವಲಯದ ಅನುದಾನವನ್ನು ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಹನಿ ನೀರಾವರಿ, ತುಂತುರು ನೀರಾವರಿ/ರೇನ್ ಗನ್ ಘಟಕಗಳ ಅಡಿಯಲ್ಲಿ ಭಾರತ ಸರ್ಕಾರ ನೀಡುವ ಆರ್ಥಿಕ ನೆರವಿಗೆ ಪೂರಕವಾಗಿ ರಾಜ್ಯ ಸರ್ಕಾರದ ಪಾಲಿನ ಆರ್ಥಿಕ ನೆರವನ್ನು ಭಾರತ ಸರ್ಕಾರದ ಮಾರ್ಗಸೂಚಿ ಮತ್ತು ಅನುಮೋದನೆ ಅನ್ವಯ ಶೇ.90ರ ರಿಯಾಯತಿ ಸೌಲಭ್ಯ ಒದಗಿಸಲು ಹಾಗೂ ಕೇಂದ್ರ ಸರ್ಕಾರದ ಅನುಮೋದನೆಗೆ ಅನುಗುಣವಾಗಿ ಜಿಲ್ಲಾವಾರು ಹಂಚಿಕೆಯನ್ನು ಮಾಡಲು, ಕಬ್ಬಿನಲ್ಲಿ ಉಪಮೇಲ್ಮೈ ಹನಿ ನೀರಾವರಿ ಸೌಲಭ್ಯ ಒದಗಿಸಲು ಹಾಗೂ ನಬಾರ್ಡ್–RIDF XXI ರಡಿಯಲ್ಲಿ ಮಂಜೂರಾದ "Installation of Micro Irrigation Systems in Agriculture Crops" ಕಾರ್ಯಕ್ರಮ ಅನುಷ್ಠಾನಕ್ಕೆ ಅನುದಾನ ಬಳಸಲಾಗುತ್ತಿದೆ.

**11.ಕೇಂದ್ರ ಪುರಸ್ಕೃತ ಯೋಜನೆ –ಎನ್.ಎಮ್.ಎಸ್.ಎ.–ಇತರೆ ಘಟಕಗಳು (2401–00–108–1–16) : ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.6065.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

1. ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ (RAD) : ಸುಸ್ಥಿರ ಕೃಷಿ ಉತ್ಪಾದಕತೆಯು ನೈಸರ್ಗಿಕ ಸಂಪನ್ಮೂಲಗಳಾದ ಗುಣಮಟ್ಟದ ಮಣ್ಣು ಮತ್ತು ನೀರಿನ ಲಭ್ಯತೆಯ ಮೇಲೆ ಅವಲಂಬಿತವಾಗಿದೆ. ಕೃಷಿ ಬೆಳವಣಿಗಯನ್ನು ಸುಸ್ಥಿರಗೊಳಿಸಲು ನೈಸರ್ಗಿಕ ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸುವ ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಮುಖಾಂತರ ಕೃಷಿ ಬೆಳವಣಿಗೆಯನ್ನು ಸುಸ್ಥಿರಗೊಳಿಸಲು ಸಾಧ್ಯ ಭಾರತದ ಕೃಷಿಯು ಪ್ರಮುಖವಾಗಿ ಮಳೆ ಆಧಾರಿತ ಕೃಷಿಯಾಗಿದ್ದು, ದೇಶದ ಶೇ.60% ಬಿತ್ತನೆ ಕ್ಷೇತ್ರ ಮತ್ತು ಶೇ.40 ಆಹಾರ ಉತ್ಪಾದನೆಯು ಮಳೆ ಆಶ್ರಯದಲ್ಲಿರುತ್ತದೆ. ಆದಕಾರಣ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಜೊತೆಗೆ ಮಳೆ ಆಧಾರಿತ ಕೃಷಿಯ ಅಭಿವೃದ್ದಿಯು ದೇಶದ ಆಹಾರ ಧಾನ್ಯಗಳ ಬೇಡಿಕೆಯನ್ನು ಪೂರೈಸಲು ಅತಿ ಮುಖ್ಯವಾಗಿರುತ್ತದೆ. ಈ ದಿಕ್ಕಿನಲ್ಲಿ ಪ್ರಮುಖವಾಗಿ ಮಳೆಯಾಶ್ರಿತ ಪ್ರದೇಶದಲ್ಲಿ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಮಳೆಯಾಶ್ರಿತ ಕ್ಷೇತ್ರದ ಅಭಿವೃದ್ಧಿ (RAD) ಕಾರ್ಯಕ್ರಮವನ್ನು ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿಯಲ್ಲಿ (NMSA) ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ಉಸ್ತುವಾರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.1451.16ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಈ ಕಾರ್ಯಕ್ರದಡಿಯಲ್ಲಿ ರೈತರ ಕ್ಷೇತ್ರದಲ್ಲಿ ಏಕದಳ ಧಾನ್ಯ, ದ್ವಿದಳ ಧಾನ್ಯ ಮತ್ತು ಎಣ್ಣೆಕಾಳು ಆಧಾರಿತ ಬೆಳೆ ಪದ್ಧತಿಗಳ ಅನುಷ್ಠಾನ. ತೋಟಗಾರಿಕ ಆಧಾರಿತ, ಪಶುಸಂಗೋಪನಾ ಆಧಾರಿತ, ಕೃಷಿ ಅರಣ್ಯ ಆಧಾರಿತ ಬೆಳೆ ಪದ್ಧತಿಗಳ ಅನುಷ್ಠಾನ. ಮಣ್ಣು ಮತ್ತು ನೀರು ಸಂರಕ್ಷಣಾ ಕ್ರಮಗಳು. ಮೌಲ್ಯವರ್ಧನೆ ಮತ್ತು ಸಂಪನ್ಮೂಲಗಳ ಸಂರಕ್ಷಣೆ ಮುಂತಾದ ಘಟಕಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2.**ಮಣ್ಣು ಆರೋಗ್ಯ ನಿರ್ವಹಣೆ :** ಈ ಯೋಜನೆಯಡಿ ಹೊಸ ಸಂಚಾರಿ/ಸ್ಥಾನಿಕ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ, ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ ,ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆ ಹಾಗೂ ಬಲವರ್ಧನೆಗಾಗಿ ಹಾಗೂ ಮಣ್ಣು ಆರೋಗ್ಯ ನಿರ್ವಹಣೆ/INM/ಸಮತೋಲನ ರಸಗೊಬ್ಬರ ಬಳಕೆ ಕುರಿತು ರೈತರಿಗೆ ಹಾಗೂ ವಿಸ್ತರಣಾ ಸಿಬ್ಬಂದಿಗಳಿಗೆ ತರಬೇತಿಗಾಗಿ ಅನುದಾನ ಬಳಕೆ ಮಾಡಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.500.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**3.ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮ** : ರಾಜ್ಯದ ಎಲ್ಲಾ ರೈತ ಹಿಡುವಳಿದಾರರಿಗೆ ಮಣ್ಣು ಪರೀಕ್ಷೆ ಮಾಡಿ ಮಣ್ಣು ಆರೋಗ್ಯ ಚೀಟಿ ವಿತರಿಸುವುದು ಹಾಗೂ ಪೋಷಕಾಂಶಗಳ ಕೊರತೆ ನೀಗಿಸಲು, ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರ ಬಳಕೆ ಮಾಡುವುದು. ಸಾಮರ್ಥ್ಯ ನಿರ್ಮಾಣ, ಕೃಷಿ ವಿದ್ಯಾರ್ಥಿಗಳ ತೊಡಗಿಸುವಿಕೆ ಮತ್ತು ICAR/SAUs ಗಳೊಂದಿಗೆ ಪರಿಣಾಮಕಾರಿ ಸಂಪರ್ಕದಿಂದ ಮಣ್ಣು ಪರೀಕ್ಷಾ ಪ್ರಯೋಗಾಲಯಗಳ ಕಾರ್ಯ ನಿರ್ವಹಣೆಯನ್ನು ಬಲಪಡಿಸುವುದು. ರಾಜ್ಯದುದ್ದಕ್ಕೂ ಮಣ್ಣು ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆಯನ್ನು ಪ್ರಮಾಣಿಕೃತ ಕಾರ್ಯ ವಿಧಾನಗಳಿಂದ ಮಣ್ಣು ಫಲವತ್ತತೆಯ ನಿರ್ಬಂಧಗಳನ್ನು ಗುರುತಿಸಲು ಹಾಗೂ ತಾಲ್ಲೂಕು ಮಟ್ಟದ ರಸಗೊಬ್ಬರ ಶಿಫಾರಸ್ಸುಗಳನ್ನು ಉದ್ದೇಶಿತ ಜಿಲ್ಲೆಗಳಲ್ಲಿ ವಿನ್ಯಾಸ ಮಾಡುವುದು ಹಾಗೂ ಪೋಷಕಾಂಶಗಳ ನಿರ್ವಹಣಾ ಪದ್ದತಿಗಳನ್ನು ಪ್ರೋತ್ಸಾಹಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಿಬ್ಬಂದಿಗಳಿಗೆ ಹಾಗೂ ಪ್ರಗತಿಪರ ರೈತರಿಗೆ ಸಾಮರ್ಥ್ಯ ವೃದ್ಧಿಸುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.2379.84 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

4.**ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY):** ಸಾವಯವ ಕೃಷಿಯಲ್ಲಿ ಪರಿಸರ ಸ್ನೇಹಿ ಉತ್ಪಾದನಾ ಪದ್ಧತಿಗಳಿಂದ ಮತ್ತು ಕಡಿಮೆ ವೆಚ್ಚದ ತಾಂತ್ರಿಕತೆ ಬಳಕೆ ಮಾಡಿಕೊಂಡು ಮಣ್ಣಿನ ಫಲವತ್ತತೆ ಕಾಪಾಡುವುದರೊಂದಿಗೆ ರಾಸಾಯನಿಕ ಉಳಿಕೆ ರಹಿತ, ಗುಣಮಟ್ಟದ ಸುರಕ್ಷಿತ ಆಹಾರದ ಉತ್ಪಾದನೆ ಮಾಡಬಹುದಾಗಿದೆ. ಇದೇ ತತ್ವದ ಆಧಾರದ ಮೇಲೆ PKVY ಯೋಜನೆಯಡಿಯೂ ಕ್ಲಸ್ಟರ್ (ಗುಚ್ಛ) ಮಾದರಿಯಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಸಹಭಾಗಿತ್ವ ಖಾತರಿ ವ್ಯವಸ್ಥೆ (PGS) ಪ್ರಮಾಣೀಕರಣ ಪದ್ಧತಿ ಅನುಸರಿಸಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.1734.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**12. ಕೃಷಿ ವಿಸ್ತರಣೆ ಮತ್ತು ತರಬೇತಿ: (2401–00–109–0–21) : ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.5402.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಅ. ವೇತನ ಮತ್ತು ಇತರೆ ಭತ್ಯೆಗಳು** : 1.ರೈತ ಮಕ್ಕಳಿಗೆ ಕೃಷಿಯಲ್ಲಿ ಸ್ವಾವಲಂಬಿಗಳಾಗುವುದಕ್ಕೆ ಸಾಧ್ಯವಾಗುವಂತಹ ತರಬೇತಿಯನ್ನು ನೀಡುವುದು ಮತ್ತು ರೈತರಿಗೆ, ರೈತ ಮಹಿಳೆಯರಿಗೆ ಹಾಗೂ ಯುವಕ ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನದಲ್ಲಿ ತರಬೇತಿ ನೀಡುವುದು. 2. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ಖರ್ಚನ್ನು ನಿರ್ವಹಿಸುವುದು, ಸಿಬ್ಬಂದಿ ವೇತನ, ಭತ್ಯೆ ಹಾಗೂ ಅಗತ್ಯ ಕಛೇರಿ ವೆಚ್ಚಗಳನ್ನು ನಿರ್ವಹಿಸುವುದು.
3. ಕಚೇರಿಗಳಿಗೆ ಸಿಬ್ಬಂದಿಯವರನ್ನು (ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಪ್ರಯೋಗ ಶಾಲಾ ಸಹಾಯಕರು, ವಾಹನ ಚಾಲಕರು, ಭದ್ರತಾ ಸಿಬ್ಬಂದಿ, ಸ್ವಚ್ಚತಾ ಸಿಬ್ಬಂದಿ, ಅಟೆಂಡರ್, ಬಾಣಸಿಗರು, ಇತರೆ) ಬಾಹ್ಯ ಮೂಲಗಳಿಂದ ಪಡೆಯಬಹುದಾಗಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.2317.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಆ. ವಿಸ್ತರಣಾಧಿಕಾರಿಗಳ ಮತ್ತು ರೈತರ/ರೈತ ಮಹಿಳೆಯರ ತರಬೇತಿ ಕಾರ್ಯಕ್ರಮ : ಈ ಯೋಜನೆಯಡಿ** ಕೃಷಿ ವಿಸ್ತರಣಾಧಿಕಾರಿಗಳ ನಿರ್ವಹಣಾ ಸಾಮರ್ಥ್ಯ ಮತ್ತು ರೈತರ/ರೈತ ಮಹಿಳೆಯರಲ್ಲಿನ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ವಿಶೇಷ ತರಬೇತಿಗಳಯ, ರೈತ/ರೈತ ಮಹಿಳೆಯರಿಗಾಗಿ ರಾಜ್ಯ ಮಟ್ಟದ ಅಧ್ಯಯನ ಪ್ರವಾಸವನ್ನು ಏರ್ಪಡಿಸುವುದು ಹಾಗೂ ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ ಮತ್ತು ಕೃಷಿ ಸಹಾಯಕರಿಗೆ ವೃತ್ತಿ ಸಾಮರ್ಥ್ಯವನ್ನು ಹೆಚ್ಚಿಸಲು ಸಾಮಾನ್ಯ ಬುನಾದಿ ತರಬೇತಿ ನೀಡುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಇ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು – ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ಬೋಧನ ಸಾಧನ ಸಾಮಗ್ರಿಗಳ ಖರೀದಿ, ಸೌರಶಕ್ತಿ ಉಪಕರಣ ನಿರ್ವಹಣೆ, ಮಳೆ ನೀರು ಕೊಯ್ಲು ನಿರ್ವಹಣೆ, ಪರಿಣಾಮಕಾರಿ ತರಬೇತಿಗೆ ಬೇಕಾದ ಪೂರಕ ಸಾಮಗ್ರಿಗಳ ಖರೀದಿ, ಸಣ್ಣ ಪುಟ್ಟ ರಿಪೇರಿ ಕೆಲಸಗಳ ನಿರ್ವಹಣೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಈ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಉನ್ನತೀಕರಣ** – ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ನೂತನ ಕಟ್ಟಡ ನಿರ್ಮಾಣ, ಮೂಲಭೂತ ಸೌಕರ್ಯಗಳನ್ನು ಬಲಪಡಿಸಿ ತರಬೇತಿಗೆ ಬರುವ ಅಭ್ಯರ್ಥಿಗಳಿಗೆ ಉತ್ತಮ ವಾಸ್ತವ್ಯ, ಪರಿಣಾಮಕಾರಿ ತರಬೇತಿಗಳನ್ನು ಏರ್ಪಡಿಸುವ ನಿಟ್ಟಿನಲ್ಲಿ ತರಬೇತಿಗೆ ಬೇಕಾದ ಪೂರಕ ಸಾಮಗ್ರಿಗಳಾದ ಶ್ರವಣ–ದೃಶ್ಯ ಸಾಧನಗಳನ್ನು ಒದಗಿಸುವುದು, ಇತ್ಯಾದಿ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಉ. ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ** – ರೈತ ಸಮುದಾಯಕ್ಕೆ ಸುಧಾರಿತ ತಾಂತ್ರಿಕತೆಗಳನ್ನು ತಲುಪಿಸಲು ಸ್ಥಳೀಯ ಜಾತ್ರೆಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಇಲಾಖಾ ಚಟುವಟಿಕೆಗಳ ಕುರಿತು ಪರಿಣಾಮಕಾರಿಯಾಗಿ ಪ್ರಚುರಪಡಿಸಲು ವಸ್ತುಪ್ರದರ್ಶನ/ಕಾರ್ಯಾಗಾರ/ಮೇಳ / ಸಿಂಪೋಜಿಯಂಗಳನ್ನು ರಾಷ್ಟ್ರ, ಅಂತರರಾಜ್ಯ, ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಮತ್ತು ಸ್ಥಳೀಯವಾಗಿ ಏರ್ಪಡಿಸುವುದು. ಸದರಿ ಯೋಜನೆಯಡಿ ಸ್ಥಬ್ದಚಿತ್ರ/ ಪ್ರದರ್ಶಿಕೆಗಳ ತಯಾರಿಕೆ, ವಿಸ್ತರಣಾ ಸಾಹಿತ್ಯ ಸಿದ್ಧಪಡಿಸಲು ಹಾಗೂ ಮುದ್ರಣ ಮತ್ತು ಇಲಾಖಾ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಸಹ ವೆಚ್ಚ ಭರಿಸುವುದು. ವಸ್ತು ಪ್ರದರ್ಶನಗಳಲ್ಲಿ ಮಳಿಗೆ ಬಾಡಿಗೆ/ಮಳಿಗೆಗೆ ಸಂಭವಿಸುವ ಇತರೆ ವೆಚ್ಚ, ಸ್ತಬ್ದ ಚಿತ್ರಗಳು, ಪ್ರದರ್ಶಿಕೆ ವಸ್ತುಗಳ ಸಾಗಾಣಿಕೆ, ಜಾತ್ರೆ/ಮೇಳಗಳಿಗೆ ರೈತರನ್ನು ಕರೆದುಕೊಂಡು ಹೋಗಲು ಸಹ ವೆಚ್ಚ ಭರಿಸಬಹುದಾಗಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಊ. ಕೃಷಿ ವಾರ್ತಾ ಘಟಕ** – ರಾಜ್ಯ/ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಸ್ತರಣಾ ಸಾಹಿತ್ಯಗಳ ಮುದ್ರಣ(ಕರ ಪತ್ರಿಕೆ, ಭಿತ್ತಿಪತ್ರ, ಫೋಲ್ಡರ್, ಇತರೆ), ಕೃಷಿ ಸಂಬಂಧಿತ ತಾಂತ್ರಿಕ ಪುಸ್ತಕ, ಅಗ್ರಿ ಡಾಕ್ಟರ್ ಡೈರಿ ಖರೀದಿ, ನಿಯತಕಾಲಿಕೆಗಳಿಗೆ ಚಂದಾದಾರತ್ವ, ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಮೂಲಕ ನೇರ ಫೋನ್‌ಇನ್ ಕಾರ್ಯಕ್ರಮ, ವಿವಿಧ ಮಾಧ್ಯಮಗಳ ಮೂಲಕ ಜಾಹೀರಾತು/ಪ್ರಕಟಣೆ ಮತ್ತು ಇನ್ನಿತರೆ ಇಲಾಖಾ ಪ್ರಚಾರ ಕಾರ್ಯಗಳಿಗೆ ತಗಲುವ ವೆಚ್ಚವನ್ನು ಭರಿಸಲಾಗುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.100.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಋ. ತಾಂತ್ರಿಕ ಉತ್ತೇಜಕರಿಗೆ ಗೌರವ ಧನ :** ಪ್ರಸ್ತಕ ಸಾಲಿನಲ್ಲಿ ಪ್ರಾತ್ಯಕ್ಷಿತೆ ಮತು ಇತರೆ ವಿಸ್ತರಣೆ ಕಾರ್ಯಕ್ರಮಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ,ತಾಂತ್ರಿಕ ಉತ್ತೇಜಕರ ಸೇವೆಯನ್ನು ಬಳಸಿಕೊಳ್ಳಲು, ಸದರಿ ರವರಿಗೆ ಗೌರವ ಧನ ನೀಡಲು ಅನುದಾನ ಬಳಕೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.294.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಏ. ರೈತ ಸಂಪರ್ಕ ಕೇಂದ್ರಗಳಿಗೆ ಕೃಷಿ ವಿದ್ಯಾರ್ಥಿಗಳ ನಿಯೋಜನೆ :** ಇಲಾಖೆಯ ಯೋಜನೆಗಳ ಸಮರ್ಪಕ ಅನುಷ್ಠಾನ, ತಂತ್ರಜ್ಞಾನ ವರ್ಗಾವಣೆಯ ಮೂಲಕ ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆಗಾಗಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದಿಂದ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು, ಕನಿಷ್ಠ ಪ್ರಾಯೋಗಿಕ ಕೌಶಲ್ಯ, ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ ರೈತ ಸಂಪರ್ಕ ಕೇಂದ್ರಗಳಿಗೆ ಕನಿಷ್ಟ 3 ತಿಂಗಳ ಅವಧಿಗೆ ನಿಯೋಜಿಸಲು ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ 3000 ಗೌರವಧನ ನೀಡಲಾಗುವುದು. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.180.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಐ. ಕೃಷಿ ಅಭಿಯಾನ (ಕೃಷಿ ಉತ್ಸವ):** ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ – ಈ ಕಾರ್ಯಕ್ರಮದಡಿ ಹೋಬಳಿ ಮಟ್ಟದಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳಾದ ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಜಲಾನಯನ, ಮೀನುಗಾರಿಕೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ ಸಮಗ್ರ ಕೃಷಿ ಮಾಹಿತಿ ಹಾಗೂ

ಎಲ್ಲಾ ಇಲಾಖೆಗಳಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಮಾಹಿತಿಯನ್ನು ಏಕ ಗವಾಕ್ಷಿ ವಿಸ್ತರಣಾ ಪದ್ಧತಿಯಲ್ಲಿ ಪ್ರಚಾರಪಡಿಸಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.556.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಔ. ಹೊರಗುತ್ತಿಗೆ ಆಧಾರದ ಮೇಲೆ ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಬ್ಬಂದಿ ನಿಯೋಜನೆ:** ರೈತ ಸಂಪರ್ಕ ಕೇಂದ್ರಗಳಲ್ಲಿ ವಹಿವಾಟು ಹಾಗೂ ಕೃಷಿ ಪರಿಕರಗಳ ಮಾರಾಟ, ರೈತರ ವಂತಿಕೆ ಸಂಗ್ರಹಣೆ, ಸದರಿ ಮೊತ್ತವನ್ನು ಬ್ಯಾಂಕಿಗೆ ಜಮೆ ಮಾಡುವುದು, ಮುಂತಾದ ಚಟುವಟಿಕೆಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು. ರೈತ ಸಂಪರ್ಕ ಕೇಂದ್ರಗಳ ಲೆಕ್ಕಪತ್ರಗಳು ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ರೈತರ ದತ್ತಾಂಶ ಅಪ್ ಲೋಡ್ ಇತ್ಯಾದಿ ಕರ್ತವ್ಯಗಳನ್ನು ನಿರ್ವಹಿಸಲು ಇವರ ಸೇವೆ ಪಡೆಯಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.1501.00ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಅಂ.ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ವಿಸ್ತರಣಾ ಪದ್ಧತಿ:** ಸದರಿ ಯೋಜನೆಯಡಿ ಡಿಜಿಟಲ್ ಕೃಷಿಯಡಿಯಲ್ಲಿ ವಿವಿಧ ಮಾಧ್ಯಮಗಳನ್ನು ಬಳಸಿ ಕೃಷಿ ವಿಸ್ತರಣಾ ಸೇವೆಯನ್ನು ಬಲಗೊಳಿಸಲಾಗುವುದು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇವರ ಸಹಯೋಗದೊಂದಿಗೆ ವಿನೂತನ ಮಾದರಿಯ ವಿಸ್ತರಣಾ ವ್ಯವಸ್ಥೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿ ಕೃಷಿ ವಿಶ್ವವಿದ್ಯಾಲಯ ಹಾಗೂ ಅಗ್ರಿ ಕ್ಲಿನಿಕ್‌ಗಳ ಮುಖಾಂತರ ಒದಗಿಸಲಾಗುವುದು.

**13. ಕೃಷಿ ಮಹಿಳೆಯರು ಮತ್ತು ಯುವಕ ರೈತರ ತರಬೇತಿ ಮತ್ತು ವಿಸ್ತರಣಾ ಕಾರ್ಯಕಮ (WYTEP)**
**(2401-00-109-0-80) : ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.481.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಈ ಯೋಜನೆಯಡಿ 116 ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ/ ಸಿಬ್ಬಂಧಿ ವರ್ಗದವರಿಗೆ ವೇತನ ಹಾಗೂ ಇತರೆ ಭತ್ಯಗಳಿಗೆ ವೆಚ್ಚ ಭರಿಸಲಾಗುತ್ತದೆ.

14. **ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿಫಸಲ್ ಬಿಮಾ ಯೋಜನೆ (ಹೊಸ ಬೆಳೆ ವಿಮಾ ಯೋಜನೆ) (2401-00-110-0-07): 2018-19 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.84500.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗಳಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವು ದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ಒದಗಿಸಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಿಕೊಳ್ಳಲಾಗುತ್ತಿದೆ.

**16. ಕೇಂದ್ರ ಪುರಸ್ಕೃತ ಯೋಜನೆ – ರಾಷ್ಟೀಯ ಕೃಷಿ ವಿಸ್ತರಣೆ ಮತ್ತು ತಂತ್ರಜ್ಞಾನ ಅಭಿಯಾನ (NMAET)**
**(2401-00-800-1-53) : ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.8530.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಅ) ಕೃಷಿ ವಿಸ್ತರಣೆ ಉಪ ಅಭಿಯಾನ:** "ವಿಸ್ತರಣಾ ಸುಧಾರಣೆಗಳಿಗಾಗಿ ರಾಜ್ಯ ವಿಸ್ತರಣಾ ಕಾರ್ಯಕ್ರಮಗಳಿಗೆ ಬೆಂಬಲ" ಯೋಜನೆಯು ವಿಸ್ತರಣಾ ಪದ್ಧತಿಯನ್ನು ರೈತರೇ ಮುನ್ನಡೆಸುವ ಹಾಗೂ ರೈತರಿಗೆ ಉತ್ತರದಾಯಿತ್ವವಾಗಬೇಕಾದ ಯೋಜನೆಯಾಗುವ ಗುರಿಯನ್ನು ಹೊಂದಿದೆ. ಇದಕ್ಕಾಗಿ ಭಾಗವಹಿಸುವಿಕೆ ಆಧಾರದ ಮೇಲೆ ವಿಸ್ತರಣಾ ಸುಧಾರಣೆಗಳನ್ನು ಜಾರಿಗೆ ತರಲು ಮತ್ತು ರೈತರಿಗೆ ತಂತ್ರಜ್ಞಾನವನ್ನು ಹೊಸ ಸಾಂಸ್ಥಿಕ ವ್ಯವಸ್ಥೆಯ ಮೂಲಕ ಪ್ರಸರಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಆತ್ಮ)ಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಈ ಯೋಜನೆಯಡಿಲ್ಲಿ ಭಾರತ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅಧಿಕಾರಿ/ರೈತರ ತರಬೇತಿ, ಅಧಿಕಾರಿ/ರೈತರ ಪರಿಚಯ ಪ್ರವಾಸ, ಪ್ರಾತ್ಯಕ್ಷಿಕೆ, ರೈತರ ಗುಂಪು ರಚನೆ, ಕೃಷಿ ಪಾಠಶಾಲೆ, ಕೃಷಿ ಮೇಳ, ಕ್ಷೇತ್ರೋತ್ಸವ ಇತ್ಯಾದಿ ಕಾರ್ಯಕ್ರಮಗಳ ಅನುಷ್ಠಾನ ಮಾಡಲಾಗುತ್ತದೆ. **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.2030.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಆ) **ಕೃಷಿ ಯಾಂತ್ರೀಕರಣ ಉಪ ಅಭಿಯಾನ:** ಕೃಷಿ ಯಾಂತ್ರೀಕರಣ ಉಪ ಅಭಿಯಾನ ಯೋಜನೆಯನ್ನು ಕೃಷಿ ಯಂತ್ರೋಪಕರಣಗಳ ಬಳಕೆಯಿಂದ ಸಾಗುವಳಿ ವಿಸ್ತೀರ್ಣದಲ್ಲಿ ಯಾಂತ್ರೀಕೃತ ಶಕ್ತಿಯನ್ನು ಹೆಕ್ಟೇರ್ ಗೆ 2.0KW ಗಳಷ್ಟು ಹೆಚ್ಚಿಸುವುದು. ಕರ್ನಾಟಕ ರಾಜ್ಯದಲ್ಲಿ ಕೃಷಿ ಯಾಂತ್ರೀಕೃತ ಶಕ್ತಿಯು ಹೆಕ್ಟೇರ್ ಗೆ 1.85 KW ಇರುತ್ತದೆ. ಈ ಯೋಜನೆಯಡಿ ತರಬೇತಿ, ಪರೀಕ್ಷೆ ಮತ್ತು ಪ್ರಮಾಣೀಕರಣ ಮೂಲಕ ಪ್ರಚಾರ ಮತ್ತು ಕೃಷಿ ಯಂತ್ರಗಳನ್ನು ಬಲಪಡಿಸುವುದು, ಪ್ರದರ್ಶನ, ಪ್ರಾತ್ಯಕ್ಷಿಕೆ, ತರಬೇತಿ ಮತ್ತು ಕೊಯ್ಲಿನೋತ್ತರ ತಂತ್ರಜ್ಞಾನ ವಿತರಣೆ ಮತ್ತು ನಿರ್ವಹಣೆ, ಕೃಷಿ ಯಂತ್ರೋಪಕರಣಗಳು ಮತ್ತು ಉಪಕರಣಗಳನ್ನು ಪಡೆಯಲು ಹಣಕಾಸಿನ ನೆರವು, ಬಾಡಿಗೆ ಆಧಾರಿತ ಕೇಂದ್ರಗಳಿಗೆ ಕೃಷಿ ಯಂತ್ರೋಪಕರಣಗಳ ಬ್ಯಾಂಕ್, ಬಾಡಿಗೆ ಆಧಾರಿತ ಕೇಂದ್ರಗಳಿಗೆ ಹೈಟೆಕ್ ಸಮೃದ್ಧ ಉಪಕರಣಗಳ ಹಬ್, ಆಯ್ದ ಗ್ರಾಮಗಳಲ್ಲಿ ಕೃಷಿ ಯಾಂತ್ರೀಕರಣ ಪ್ರಚಾರ, ಬಾಡಿಗೆ ಆಧಾರಿತ ಕೇಂದ್ರಗಳಿಗೆ ಯಾಂತ್ರೀಕೃತ ಕಾರ್ಯಾಚರಣೆಗಳ ಪ್ರಚಾರಕ್ಕಾಗಿ ಹಣಕಾಸಿನ ನೆರವು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.6000.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಇ) ಬಿತ್ತನೆ ಬೀಜ ಮತ್ತು ಬಿತ್ತನೆ ಸಾಮಗ್ರಿ ಉಪ ಅಭಿಯಾನ – ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ರಾಜ್ಯ ಬೀಜೋತ್ಪಾದನಾ ಕ್ಷೇತ್ರಗಳ ಬಲವರ್ಧನೆ, ಬೀಜ ಪರೀಕ್ಷಾ ಪ್ರಯೋಗಾಲಯಗಳ ಬಲವರ್ಧನೆ, ಬೀಜ ಪ್ರಮಾಣನ ಸಂಸ್ಥೆಗಳಿಗೆ ಬೆಂಬಲ, ಬೀಜೋಪಚಾರ ಇತ್ಯಾದಿ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.500.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**17. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) (2401–00–800–1–57): 2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.19800.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

ಈ ಯೋಜನೆಯಡಿ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಹೆಚ್ಚಿನ ಸಾರ್ವಜನಿಕ ಹೂಡಿಕೆಗಾಗಿ ರಾಜ್ಯಗಳಿಗೆ ಪ್ರೋತ್ಸಾಹಿಸುವುದು, ಜಿಲ್ಲಾ ಕೃಷಿ ಯೋಜನೆಗಳಲ್ಲಿ ಸ್ಥಳೀಯ ಆದ್ಯತೆಗಳು/ ಅವಶ್ಯಕತೆಗಳು/ಬೆಳೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದು, ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಮುಖ್ಯ ಬೆಳೆಗಳ ಉತ್ಪಾದಕೆತೆಯಲ್ಲಿ ಇರುವ ವ್ಯತ್ಯಯದ ಪ್ರಮಾಣವನ್ನು ಕಡಿತಗೊಳಿಸುವುದು, ಕೃಷಿ ಮತ್ತು ಸಂಬಂಧಿತ ವಲಯದ ಎಲ್ಲಾ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ಉತ್ಪಾದನೆ/ಉತ್ಪಾದಕತೆಯ ವಿವಿಧ ಘಟಕಗಳಲ್ಲಿ ಗಣನೀಯ ಬದಲಾವಣೆ ತರುವುದು ಹಾಗೂ ಕೃಷಿ ಮತ್ತು ಸಂಬಂಧಿತ ವಲಯಗಳಿಂದ ರೈತರಿಗೆ ಹೆಚ್ಚಿನ ಲಾಭಾಂಶವನ್ನು ದೊರಕಿಸುವುದು.

19. **ಖಾಲಿ ಹುದ್ದೆಗಳಿಗಾಗಿ ಅನುದಾನ (2401–00–800–1–70)** : ಖಾಲಿ ಹುದ್ದೆಗಳು ಭರ್ತಿಯಾದಲ್ಲಿ ವೇತನ ನೀಡಲು ಅನುದಾನ ಒದಗಿಸಿಕೊಳ್ಳಲಾಗಿದೆ. **2018–19 ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.464.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**20. ವೇತನಕ್ಕಾಗಿ ಹೆಚ್ಚುವರಿ ಅನುದಾನ –6ನೇ ವೇತನ ಆಯೋಗ (2401–00–800–1–71) :** ವೇತನಕ್ಕಾಗಿ ಹೆಚ್ಚುವರಿ ಅನುದಾನ (6ನೇ ವೇತನ ಆಯೋಗ) ವೇತನ ಭತ್ಯೆಗಳ ಪಾವತಿಗೆ ರೂ.**24000.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**21. ಕೃಷಿ ಮೂಲಭೂತ ಸೌಕರ್ಯ (4401–00–001–1–01) : ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.5120.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಅ. ಬಂಡವಾಳ ವೆಚ್ಚಗಳು (ಪ್ರಮುಖ ಕಾಮಗಾರಿಗಳು):** ಈ ಕಾರ್ಯಕ್ರಮದಡಿ ನಬಾರ್ಡ್ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರೈತ ಸಂಪರ್ಕ ಕೇಂದ್ರಗಳಿಗೆ ಸ್ವಂತ ಕಟ್ಟಡಗಳ ನಿರ್ಮಾಣದ ಮೂಲಕ ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆ ಮಾಡಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.1000.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**ಆ. ರೈತ ಸಂಪರ್ಕ ಕೇಂದ್ರಗಳು:** ರಾಜ್ಯದಲ್ಲಿ ರೈತರಿಗೆ ಅವಶ್ಯವಿರುವ ಕೃಷಿ ಪರಿಕರಗಳು ಹಾಗೂ ತಾಂತ್ರಿಕತೆಯನ್ನು ಒದಗಿಸಲು ಹೋಬಳಿ ಮಟ್ಟದಲ್ಲಿ 740 ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸದರಿ ಕೇಂದ್ರಗಳ ನಿರ್ಮಾಣ ಕಾಮಗಾರಿ ಕೈಗಲಳ್ಳಲಾಗುತ್ತಿದೆ. **ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.4120.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**22. ಇಸ್ರೇಲ್ ಮಾದರಿ ಕೃಷಿ ತಾಂತ್ರಿಕತೆ ಗುಚ್ಛಗಳ ಅಭಿವೃದ್ಧಿ (4401–00–108–0–01) (ಹೊಸ ಕಾರ್ಯಕ್ರಮ):** ಇಸ್ರೇಲ್ ದೇಶದ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ಖುಷ್ಕಿ ರೈತರಿಗಾಗಿ **"ಕೃಷಿ ತಾಂತ್ರಿಕತೆ ಗುಚ್ಛಗಳ ಅಭಿವೃದ್ಧಿ"** ಪಡಿಸಲು ನೀರಾವರಿ ವ್ಯವಸ್ಥೆಯಿಂದ ರೈತರ ಬೆಳೆಗಳನ್ನು ಕಾಪಾಡಲು, ಕೋಲಾರ, ಚಿತ್ರದುರ್ಗ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ತಲಾ 5000 ಹೆಕ್ಟೇರ್ ಖುಷ್ಕಿ ಜಮೀನಿನಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಅನುದಾನ ಬಳಕೆ ಮಾಡಲಾಗುವುದು.
**ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.14592.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**

**1. ಜಿಲ್ಲಾವಲಯ ಯೋಜನೆಗಳು :**

**ಅ. ಕೃಷಿ ಕ್ಷೇತ್ರಗಳು ಹಾಗೂ ಅಭಿವೃದ್ಧಿ ಕೇಂದ್ರಗಳು:** ಈ ಯೋಜನೆ ಅಡಿ ಬೀಜೋತ್ಪಾದನಾ ಕೇಂದ್ರ / ಕೃಷಿ ಕ್ಷೇತ್ರಗಳಲ್ಲಿ ಕೃಷಿ ಚಟುವಟಿಕೆ ಕಾರ್ಯಕ್ರಮ, ಎತ್ತುಗಳ ಖರೀದಿ, ಟ್ರ್ಯಾಕ್ಟರ್/ ಪವರ್ ಟಿಲ್ಲರ್ ರಿಪೇರಿ, ಇಂಧನ, ಪೈಪ್ ಲೈನ್ ಜೋಡಣೆ, ತಂತಿ ಬೇಲಿ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾರ್ಯಗಳು ಮತ್ತು ಮೂಲ ಭೂತ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

**ಆ. ರೈತರಿಗೆ ಸಹಾಯ:** ಕೃಷಿ ವಲಯಗಳಲ್ಲಿ ಬೆಳೆಗಳನ್ನು ಬಾಧಿಸುವ ಕೀಟ/ರೋಗ/ ಕಳೆಗಳ ನಿರ್ವಹಣೆಗೆ ತುರ್ತು ಸಸ್ಯ ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲು ರೈತರಿಗೆ ರಿಯಾಯಿತಿ ದರದಲ್ಲಿ ಕೀಟನಾಶಕಗಳು, ಶಿಲೀಂದ್ರನಾಶಕಗಳು, ಕಳೆನಾಶಕಗಳು, ಸಸ್ಯಮೂಲ ಕೀಟನಾಶಕಗಳು ಮತ್ತು ಜೈವಿಕ ಪೀಡೆನಾಶಕ/ಜೈವಿಕ ನಿಯಂತ್ರಣಕಾರಕಗಳು ಮುಂತಾದುವುಗಳನ್ನು ಸಂದರ್ಭಕ್ಕೆ ಹಾಗೂ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಶೇ.50 ರ ರಿಯಾಯಿತಿಯಲ್ಲಿ ಪ್ರತಿ ಹೆಕ್ಟೇರಿಗೆ ರೂ.500/– ಮೀರದಂತೆ ಪ್ರತಿ ರೈತರಿಗೆ ಪ್ರತಿ ಹಂಗಾಮಿಗೆ ಗರಿಷ್ಠ 2 ಹೇಕ್ಟೇರಿಗೆ ಸೀಮಿತಗೊಳಿಸಿ ವಿತರಿಸುವುದು. ವಿವಿಧ ಕೃಷಿ ಬೆಳೆಗಳನ್ನು ಬಾಧಿಸುವ ಕೀಟ/ರೋಗ/ಕಳೆಗಳ ನಿರ್ವಹಣೆ ಸಲುವಾಗಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ಶೇ.50 ರಿಯಾಯಿತಿಯಲ್ಲಿ ಪ್ರತಿಯೊಂದು ಉಪಕರಣಕ್ಕೆ ಗರಿಷ್ಠ ರೂ. 800/– ಮೀರದಂತೆ ವಿತರಿಸುವುದು.

**ಇ.ಬೇಸಾಯ ಸಂಬಂಧಿತ ಚಟುವಟಿಕೆಗಳು:** ಖಾಸಗಿ ಕಟ್ಟಡಗಳಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಬಾಡಿಗೆ ಪಾವತಿ, ರೈತ ಸಂಪರ್ಕ ಕೇಂದ್ರಗಳ ದೈನಂದಿನ ಕಾರ್ಯನಿರ್ವಹಣೆ ಮತ್ತು ಕಟ್ಟಡಗಳ ನಿರ್ವಹಣೆ ಸೇರಿದಂತೆ ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಅಗತ್ಯ ಪ್ರಾತ್ಯಕ್ಷತೆಗಳನ್ನು ತೆಗೆದುಕೊಳ್ಳುವುದು.

**ಈ.ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ:** ರಾಜ್ಯದ ರೈತ ಬಾಂಧವರಿಗೆ ಆಧುನಿಕ ಕೃಷಿ ತಾಂತ್ರಿಕತೆಯನ್ನು ಪರಿಚಯಿಸಲು ಕೃಷಿ ವಸ್ತು ಪ್ರದರ್ಶನಗಳು ಏರ್ಪಡಿಸಲು ಅವಕಾಶ ಕಲ್ಪಿಸಿದ್ದು,ವಸ್ತು ಪ್ರದರ್ಶನಗಳಿಗಾಗಿ ಒದಗಿಸಲಾದ ಅನುದಾನದಲ್ಲಿ ಮಳಿಗೆಯ ಬಾಡಿಗೆ, ಉತ್ತಮ ಪ್ರದರ್ಶಿಕೆಗಳ ತಯಾರಿಕೆ, ಸ್ತಬ್ಧ ಚಿತ್ರಗಳು, ಪ್ರದರ್ಶಿಕೆ ವಸ್ತುಗಳ ಸಾಗಾಣಿಕೆ ,ಅವಶ್ಯಕವೆನಿಸಿದಲ್ಲಿ ವಿಸ್ತರಣಾ ಸಾಹಿತ್ಯಗಳ ಮುದ್ರಣಕ್ಕಾಗಿ ಹಾಗೂ ಮಳಿಗೆಗೆ ಸಂಭವಿಸುವ ಇತರೆ ವೆಚ್ಚಗಳಿಗೆ ನಿಯಮಾನುಸಾರ ಜಿಲ್ಲೆಗೆ ನೀಡಿರುವ ಅನುದಾನವನ್ನು ವಿನಿಯೋಗಿಸಬಹುದಾಗಿದೆ.

**ಉ.ಕೃಷಿ ಕಚೇರಿ ಕಟ್ಟಡ ನಿರ್ಮಾಣ:** ಜಿಲ್ಲೆಗಳಲ್ಲಿ ಅತ್ಯಗತ್ಯ ಕಟ್ಟಡ ನಿರ್ವಹಣಾ ವೆಚ್ಚಗಳನ್ನು ಭರಿಸಲು ಅನುದಾನವನ್ನು ಅವರುಗಳ ಬೇಡಿಕೆ ಅನುಸಾರವಾಗಿ ಬಳಸಲಾಗುವುದು.

**ಊ.ಇತರೆ ಕೃಷಿ ಯೋಜನೆ:** ರಿಯಾಯಿತಿ ದರದಲ್ಲಿ ಅನುಮೋದಿತ ಎತ್ತು ಚಾಲಿತ/ಮಾನವಚಾಲತ ಉಪಕರಣಗಳನ್ನು ವಿತ್ತರಿಸಲಾಗುವುದು.

**ಎ.ಸಾವಯವ ಗೊಬ್ಬರ:**ಈ ಯೋಜನೆಯಡಿ ಹಸಿರೆಲೆ ಗೊಬ್ಬರ ಬೀಜ, ಜಿಪ್ಸಂ / ಕೃಷಿ ಸುಣ್ಣ/ ಡೋಲೋಮೈಟ್, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಎರೆಹುಳು ಗೊಬ್ಬರ, ಸಿಟಿ ಕಾಂಪೋಸ್ಟ್ ಸಾವಯವ ಗೊಬ್ಬರ ಮತ್ತು ರಂಜಕಯುಕ್ತ ಸಾವಯವ ಗೊಬ್ಬರ ಮತ್ತು ಹರಳು ರೂಪದ ಸಾವಯವ ಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದರ ಜೊತೆಗೆ ಎರೆಹುಳು ಗೊಬ್ಬರ ಮತ್ತು ದ್ರವ ರೂಪದ ಸಾವಯವ ಗೊಬ್ಬರ ಉತ್ಪಾದನೆಗೆ ಪ್ರೋತ್ಸಾಹಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

**ಏ.ಸಮೀಕ್ಷಾ ಸಾಧನಾ ಸಾಮಗ್ರಿ:** ಜಿಲ್ಲೆಗಳಲ್ಲಿ ಬೆಳೆ ಅಂದಾಜುಸಮೀಕ್ಷಾ ಸಾಧನಾ ಸಾಮಗ್ರಿಗಳ ಸರಬರಾಜುಗಳಿಗೆ ಅನುದಾನವನ್ನು ಬಳಸಲಾಗುವುದು.

21. ಭೂಸಾರದ ಸಮೀಕ್ಷೆ ಮತ್ತು ಪರೀಕ್ಷೆ: **ಈ ಕಾರ್ಯಕ್ರಮದ ಅನುಷ್ಟಾನಕ್ಕೆ ರೂ.40.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.**